ಸಂಪುಟ : 8 ಸಂಚಿಕೆ : 151 ಪುಟ : 4 ಬೆಲೆ : 3.00 ಮಂಗಳವಾರ ಜುಲೈ 18, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 151 Pages : 4 Price : 3.00 Tuesday July 18, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ನರೇಗಲ್ಲ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ 02 ತಾಂತ್ರಿಕ ಪರಿಣಿತರಿಗೆ (ಡಾಟಾ ಎನಲಿಸ್ಟ್ –1 ಮತ್ತು ಸಿವಿಲ್ ಇಂಜನೀಯರ್ ಮತ್ತು ಸ್ಯಾನಿಟೇಷನ್ –01) ಕೌಶಲ್ಯ ಮತ್ತು ಸಾಮರ್ಥ್ಯ ವೃದ್ಧಿಪಡಿಸುವ ಉದ್ದೇಶದಿಂದ ಮಾತ್ರ ಅರ್ಜಿ ಕರೆಯಲಾಗಿದೆ. ಆಸಕ್ತಿಯುಳ್ಳವರು ಆಗಸ್ಟ್ 1 ರ ಒಳಗಾಗಿ TULIP https://internship.aicte-india.org ನೊಂದಾಯಿಸಿಕೊಳ್ಳಬಹುದಾಗಿದೆ. ಪರೀಕ್ಷಾರ್ಥ ತರಬೇತಿ ಅಭ್ಯರ್ಥಿಗಳ ಆಯ್ಕೆಗಾಗಿ ಕರ್ತವ್ಯ ನಿರ್ವಹಿಸಿದವರಿಗೆ ಕಚೇರಿಯಿಂದ ಪ್ರಮಾಣ ಪತ್ರ ನೀಡಲಾಗುವುದು ಎಂದು ನರೇಗಲ್ ಪಟ್ಟಣ ಪಂಚಾಯತ್ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಮುಂಡರಗಿ ವ್ಯಾಪ್ತಿಯಲ್ಲಿ ಬರುವ ತಾಂತ್ರಿಕ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ The Urban Iternship Learning Programme ( TULIP ಕಾರ್ಯಕ್ರಮದಡಿ ಸ್ವಚ್ಛ ಭಾರತ ಮಿಷನ್ ಹಾಗೂ ಘನ ತ್ಯಾಜ್ಯವಸ್ತು ನಿರ್ವಹಣೆಗಾಗಿ ಇಬ್ಬರು ಹಾಗೂ ಐ ಇ ಸಿ ಕಾರ್ಯಕ್ರಮದಡಿ ಒಬ್ಬರು ತಾಂತ್ರಿಕ ಕೌಶಲ್ಯವುಳ್ಳ ವಿದ್ಯಾರ್ಥಿಗಳು ತರಬೇತಿ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ. ಇಂಟರ್ನಶಿಪ್ ಅವಧಿ ಕನಿಷ್ಠ 2 ತಿಂಗಳಿಂದ ಗರಿಷ್ಠ 1 ವರ್ಷಗಳ ಅವಧಿಗೆ ಇರುತ್ತದೆ. ಆಸಕ್ತರು ಜುಲೈ 24 ರೊಳಗಾಗಿ ಆನ್‌ಲೈನ್ ಮೂಲಕ https://internship.aice-india.org/login ರಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮುಂಡರಗಿ ಪುರಸಭೆ ಪ್ರಕಟಣೆ ತಿಳಿಸಿದೆ.

## ಉದ್ಯಾನವನದಲ್ಲಿ ಸಂಧ್ಯಾರಾಗ




■ ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಸಂಧ್ಯಾರಾಗ ಕಾರ್ಯಕ್ರಮವು ರವಿವಾರದಂದು ಸಾಯಂಕಾಲ 5.30 ರಿಂದ 6.30 ರವರೆಗೆ ನಗರದ ಭೀಷ್ಮ ಕೆರೆ ಬಸವೇಶ್ವರ ಪುತ್ಥಳಿ ಆವರಣದಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ಗವಿಸಿದ್ದಯ್ಯ ಹಳ್ಳಿಕೇರಿಮಠ ಅವರಿಂದ ಜನಪದ ಸಂಗೀತ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ವಿಭೂತಿ ಹಾಜರಿದ್ದರು.

## ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಕೋರ್ಸುಗಳ ಪ್ರವೇಶ ಆರಂಭ

■ ವಿಜಯಸಾಕ್ಷಿ ಸುದ್ದಿ, ಗದಗ

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪ್ರಸಕ್ತ 2023–24ನೇ (ಜುಲೈ ಆವೃತ್ತಿ) ಶೈಕ್ಷಣಿಕ ಸಾಲಿಗೆ ಪ್ರವೇಶ ಪ್ರಕ್ರಿಯೆ ಆರಂಭಿಸಿದ್ದು, ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳಾದ ಬಿ.ಎ, ಬಿ.ಕಾಂ, ಬಿ.ಲಿಬ್, ಬಿ.ಬಿ.ಎ, ಬಿ.ಸಿ.ಎ, ಬಿ.ಎಸ್ಸಿ, ಬಿ.ಎಸ್.ಡಬ್ಲ್ಯೂ ಹಾಗೆಯೇ ಎಂ.ಎ–ಪತ್ರಿಕೋದ್ಯಮ. ಸ್ನಾತಕೋತ್ತರ ಪದವಿಗಳಾದ ಎಂ.ಕಾಂ, ಎಂ.ಬಿ.ಎ, ಎಂ.ಲಿಬ್, ಎಂ.ಎಸ್ಸಿ, ಎಂ.ಸಿ.ಎ, ಎಂ.ಎಸ್.ಡಬ್ಲ್ಯೂ ಹಾಗೂ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನ ಪ್ರವೇಶಾತಿಗಳು ಆರಂಭವಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಗದಗ ಪ್ರಾದೇಶಿಕ ಕೇಂದ್ರದಲ್ಲಿ ಮಹಿಳಾ ಮತ್ತು ಪುರುಷ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಅವಕಾಶ ಕಲ್ಪಿಸಿದೆ. ಈ ಪ್ರಕ್ರಿಯೆ ಜೂನ್ 30ರಂದು ಪ್ರಾರಂಭವಾಗಿ ಆಗಸ್ಟ್ 31ರಂದು ಮುಕ್ತಾಯಗೊಳ್ಳುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಅರ್ಜಿಗಳನ್ನು ಅಧಿಕೃತ ವೆಬ್‌ಸೈಟ್ www.ksoumysuru.ac.in ನಲ್ಲಿ KSOU Admission Portal ಮೂಲಕ ಪದವಿಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿ ನಂತರ ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಿ ಆನ್‌ಲೈನ್ ಮುಖಾಂತರ ಪ್ರವೇಶಾತಿ ಶುಲ್ಕ ಪಾವತಿಸಿ ಪ್ರವೇಶ ಪಡೆಯಲು ಗದಗ ಪ್ರಾದೇಶಿಕ ನಿರ್ದೇಶಕರಾದ ಶ್ರೀ.ಸಿದ್ಧಾರ್ಥ್.ಬಿ.ಎನ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಿದ್ಧಾರ್ಥ್.ಬಿ.ಎನ್,ಪ್ರಾದೇಶಿಕ ನಿರ್ದೇಶಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಗದಗ ಪ್ರಾದೇಶಿಕ ಕೇಂದ್ರ, ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ–582101 ಹಾಗೂ ಕಚೇರಿ ದೂರವಾಣಿ ಸಂಖ್ಯೆ: 8618929376ರನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

## ಎಸ್.ಬಿ. 293 ಸೂರ್ಯಕಾಂತಿ ಮಾರಾಟಕ್ಕೆ ತಡೆಯಾಜ್ಞೆ

■ ವಿಜಯಸಾಕ್ಷಿ ಸುದ್ದಿ, ಗದಗ

ಮುಂಡರಗಿ ತಾಲೂಕಿನ ಡಂಬಳ ಹೋಬಳಿಯ ಪೇಠಾಲೂರ, ಬರದೂರ ಹಾಗೂ ಇತರೆ ಗ್ರಾಮದಲ್ಲಿ ಎಸ್.ಬಿ. 293 ಸೂರ್ಯಕಾಂತಿ ಹೈಬ್ರಿಡ ತಳಿ ಬೆಳೆದ ರೈತರ ಸಮಸ್ಯಾತ್ಮಕ ಕ್ಷೇತ್ರಗಳಿಗೆ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳ ತಂಡವು ದಿನಾಂಕ 26–06–2023 ರಂದು ಭೇಟಿ ನೀಡಿ ಪರಿಶೀಲಿಸಿದ್ದು, ವೈಜ್ಞಾನಿಕ ವರದಿಯನ್ನು ದಿನಾಂಕ 14–07–2023ರಂದು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಸಿಂಜೆಂಟಾ ಸಂಸ್ಥೆಯ ಎಸ್.ಬಿ. 293 ಸೂರ್ಯಕಾಂತಿ ಹೈಬ್ರಿಡ್ 30% ರಿಂದ 50% ರಷ್ಟು ಜೊಳ್ಳು ಹಾಗೂ ಗೊಡ್ಡುರೋಗ ( Phyllody) ಎಂದು ವರದಿ ಸಲ್ಲಿಸಿರುತ್ತಾರೆ. ಈ ಕುರಿತು ಚರ್ಚಿಸಲು ದಿನಾಂಕ 15–07–2023 ರಂದು ಬೆಳಿಗ್ಗೆ 11.00 ಘಂಟೆಗೆ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಮುಂಡರಗಿ ರೈತ ಮುಖಂಡರು ಹಾಗೂ ಸಿಂಜೆಂಟಾ ಸಂಸ್ಥೆಯ ಪ್ರಾಂತೀಯ ವ್ಯವಸ್ಥಾಪಕರನ್ನೊಳಗೊಂಡು ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು.

ಸಭೆಯಲ್ಲಿ ಚರ್ಚಿಸಿದಂತೆ ಸಿಂಜೆಂಟಾ ಸಂಸ್ಥೆಯ ಎಸ್.ಬಿ. 293 ಸೂರ್ಯಕಾಂತಿ ಸಮಸ್ಯಾತ್ಮಕ ಬೆಳೆಯ ವರದಿಯಾಗಿರುವ ಕಾರಣ ಮುಂಡರಗಿ ತಾಲೂಕಿನ ಡಂಬಳ ಹೋಬಳಿಯ ಪೇಠಾಲೂರ, ಬರದೂರ ಹಾಗೂ ಇತರೆ ಗ್ರಾಮದ ರೈತ ಮುಖಂಡರುಗಳು ಈ ಕಛೇರಿಗೆ ಸಿಂಜೆಂಟಾ ಸಂಸ್ಥೆಯ ಎಸ್.ಬಿ. 293 ಸೂರ್ಯಕಾಂತಿ ಬೀಜಗಳನ್ನು ಮಾರಾಟ ತಡೆಹಿಡಿಯುವಂತೆ ಮನವಿ ಸಲ್ಲಿಸಿರುತ್ತಾರೆ. ಈ ಕಾರಣಗಳಿಗಾಗಿ ಸಿಂಜೆಂಟಾ ಸಂಸ್ಥೆಯ ಎಸ್.ಬಿ. 293 ಸೂರ್ಯಕಾಂತಿ ಹೈಬ್ರಿಡ್ ಬೀಜಗಳನ್ನು ಮುಂದಿನ ಆದೇಶದವರೆಗೆ ಬೀಜ ಅಧಿನಿಯಮ 1966 (7)ರ ಪ್ರಕಾರ ಮಾರಾಟ ಮಾಡದಂತೆ ಮಾರಾಟ ತಡೆಯಾಜ್ಞೆಯನ್ನು ಹೊರಡಿಸಲಾಗಿದೆ ಎಂದು ಗದಗ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿವಿಧ ಇಲಾಖೆಗಳೊಂದಿಗೆ ಮಕ್ಕಳ ರಕ್ಷಣಾ ವ್ಯವಸ್ಥೆ ಕುರಿತು ನಡೆದ ಸಭೆಯಲ್ಲಿ ಅಧ್ಯಕ್ಷರಾದ ಶೇಖರಗೌಡ ರಾಮತ್ನಾಳ ಸೂಚನೆ

# ಮಕ್ಕಳ ಹಕ್ಕುಗಳ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ



> ಶಾಲೆಗಳಲ್ಲಿ ನಿಯಮಿತ ಆರೋಗ್ಯ ತಪಾಸಣೆಯಾಗಬೇಕು. ವಸತಿ ಶಾಲೆಯಲ್ಲಿ ಮಕ್ಕಳ ಆರೋಗ್ಯದ ಕುರಿತು ನಿರ್ಲಕ್ಷ್ಯ ತೋರಬಾರದು ಹಾಗೂ ಮಕ್ಕಳಿಗೆ ಮೂಲಭೂತ ಸೌಕರ್ಯ, ಸುರಕ್ಷಿತ ವಿದ್ಯುತ್ ಸಂಪರ್ಕ ಇರುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಅಪಘಾತ ಸಂಭವಿಸುವ ಸಾಧ್ಯತೆ ಇದ್ದು ಸಂಬಂಧಿತ ಮುಖ್ಯಸ್ಥರೇ ಹೊಣೆಗಾರರಾಗಲಿದ್ದಾರೆ. ಮಕ್ಕಳಿಗೆ ಏನಾದರೂ ಸಮಸ್ಯೆಯಾದಲ್ಲಿ ಸ್ವತ: ಮಕ್ಕಳೆ ಆಗಮಿಸಿ ಪೊಲೀಸ್ ಸ್ಟೇಶನ್‌ಗೆ ದೂರು ಕೊಡುವ ಕುರಿತು ಅವರಿಗೆ ಅರಿವು ಮೂಡಿಸಬೇಕು.
> **–ಕೆ.ಟಿ. ತಿಪ್ಪೇಸ್ವಾಮಿ,** ಮಕ್ಕಳ ಹಕ್ಕುಗಳ ಆಯೋಗದ ಸದಸ್ಯರು.

> ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಮಾತನಾಡಿ, ಜಿಲ್ಲೆಯಲ್ಲಿ 2022–23ನೇ ಸಾಲಿನಲ್ಲಿ 47, 2023–24ನೇ ಸಾಲಿನಲ್ಲಿ (ಜುಲೈ 15 ತಿಂಗಳ ಅಂತ್ಯಕ್ಕೆ) 9 ಬಾಲ್ಯ ವಿವಾಹಗಳನ್ನು ತಡೆಯಲಾಗಿದೆ. ಕೋವಿಡ್‌ನಿಂದ ಪೋಷಕರಿಬ್ಬರನ್ನು ಕಳೆದುಕೊಂಡ ವಿಸ್ತೃತ ಕುಟುಂಬದ ಸದಸ್ಯರ ಆರೈಕೆಯಲ್ಲಿ 18 ವರ್ಷದೊಳಗಿನ ಮಕ್ಕಳಿಗೆ ಪಾಲನೆ, ಪೋಷಣೆ ಮತ್ತು ರಕ್ಷಣೆ ಒದಗಿಸಿ ಅವರ ಸರ್ವತೋಮುಖ ಬೆಳವಣಿಗೆಗೆ ಸೌಕರ್ಯ ಒದಗಿಸಲು ಮುಖ್ಯಮಂತ್ರಿ ಬಾಲ ಸೇವಾ ಯೋಜನೆಯಡಿ ಪ್ರತಿ ಮಗುವಿಗೆ ಪ್ರತಿ ತಿಂಗಳು 3500ರೂಗಳಂತೆ ಜಿಲ್ಲೆಯಲ್ಲಿ 5 ಅರ್ಹ ಫಲಾನುಭವಿ ಮಕ್ಕಳಿಗೆ ಸಹಾಯಧನ ನೀಡಲಾಗುತ್ತಿದೆ. ವಿಶೇಷ ದತ್ತು ಸಂಸ್ಥೆಯಲ್ಲಿ 3 ಮಕ್ಕಳ ಪೋಷಣೆ ನಡೆಯುತ್ತಿದೆ. ಜಿಲ್ಲೆಯಲ್ಲಿ ಶಿಶು ಮಕ್ಕಳ ರಕ್ಷಣೆಗಾಗಿ ಸಾರ್ವಜನಿಕ ಜನದಟ್ಟಣೆ ಇರುವ ಸ್ಥಳಗಳಲ್ಲಿ, ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ, ರೇಲ್ವೆ ನಿಲ್ದಾಣಗಳಲ್ಲಿ ಮತ್ತು ಬಸ್ ನಿಲ್ದಾಣಗಳಲ್ಲಿ ಮಮತೆಯ ತೊಟ್ಟಿಲುಗಳನ್ನು ಇರಿಸಲಾಗಿದೆ. ಸಾರ್ವಜನಿಕರಲ್ಲಿ ಈ ಕುರಿತು ಅರಿವು ಮತ್ತು ಜಾಗೃತಿ ಮೂಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

■ ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳ ಹಕ್ಕುಗಳ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಈ ಕುರಿತು ಅರಿವು ಮೂಡಿಸುವುದು ಮಕ್ಕಳ ರಕ್ಷಣಾ ಘಟಕ ಸೇರಿದಂತೆ ಎಲ್ಲ ಇಲಾಖೆಯ ಕರ್ತವ್ಯವಾಗಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ರಾಮತ್ನಾಳ ತಿಳಿಸಿದರು.

ಜಿಲ್ಲಾಡಳಿತ ಭವನದಲ್ಲಿ ಸೋಮವಾರದಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ವಿವಿಧ ಇಲಾಖೆಗಳೊಂದಿಗೆ ಮಕ್ಕಳ ರಕ್ಷಣಾ ವ್ಯವಸ್ಥೆ ಕುರಿತು ಭಾಗಿದಾರರೊಂದಿಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಂಗನವಾಡಿ ಕೇಂದ್ರ, ಶಾಲಾ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ 1098 ಶಾಶ್ವತ ಫಲಕ ಬರೆಯಿಸಲು ತಿಳಿಸಿದರು. ಶಾಲೆಗಳಲ್ಲಿ ಪ್ರತಿ ತಿಂಗಳು ಮಕ್ಕಳ ಸಭೆಗಳನ್ನು ಜರುಗಿಸುವದರ ಜೊತೆಗೆ ಗ್ರಾಮ ಪಂಚಾಯತ್‌ಗಳಲ್ಲಿಯೂ ಸಹ ಮಕ್ಕಳ ಸಹಾಯವಾಣಿ 1098 ಶಾಶ್ವತ ಫಲಕ ಅಳವಡಿಸಬೇಕು. ಬಾಲ್ಯ ವಿವಾಹ ನಡೆಯುತ್ತಿರುವ ಕುರಿತು ಮಾಹಿತಿ ಬಂದರೆ ತಕ್ಷಣವೇ ವಿಳಂಬಕ್ಕೆ ಆಸ್ಪದ ನೀಡದೆ ಸ್ಥಳಕ್ಕೆ ಧಾವಿಸಿ ಅಗತ್ಯ ದಾಖಲಾತಿಗಳೊಂದಿಗೆ ಎಫ್. ಐ.ಆರ್ ದಾಖಲಿಸಲು ಕ್ರಮ ವಹಿಸಬೇಕು.

ಶಾಲೆಯಲ್ಲಿ ▸▸ 3ನೇ ಪುಟಕ್ಕೆ

### ಶ್ರೀ ದಿಂಗಾಲೇಶ್ವರ ಸ್ವಾಮೀಜಿಗಳಿಗೆ ರಕ್ಷಣೆ ಒದಗಿಸುವಂತೆ ಫಕ್ಕೀರೇಶ ಮ್ಯಾಟಣ್ಣವರ ಆಗ್ರಹ

# ಶ್ರೀಗಳ ಭದ್ರತೆಗಾಗಿ ಅಂಗರಕ್ಷಕರನ್ನು ನೇಮಿಸಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನಾಡಿನ ಹೆಸರಾಂತ ಶ್ರೀ ಶಿರಹಟ್ಟಿ ಫಕೀರೇಶ್ವರ ಸಂಸ್ಥಾನ ಮಠದ ಉತ್ತರಾಧಿಕಾರಿಗಳಾದ ಜ.ಶ್ರೀ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳ ಮೇಲೆ ಯಾರೋ ಸಂಚು ರೂಪಿಸುತ್ತಿರುವ ಅನುಮಾನವಿದ್ದು, ಸರ್ಕಾರ ಸೂಕ್ತ ರಕ್ಷಣೆ, ಭದ್ರತೆ ಕಲ್ಪಿಸಲೇಬೇಕು. ಸರ್ಕಾರ ಇದನ್ನು ಭಕ್ತರ ಪರವಾದ ಮನವಿ ಎಂದಾದರೂ ಭಾವಿಸಲಿ, ಇಲ್ಲವೇ ಎಚ್ಚರಿಕೆ ಎಂದಾದರೂ ಭಾವಿಸಲಿ ಎಂದು ಶ್ರೀಮಠದ ಭಕ್ತ, ಕಾಂಗ್ರೆಸ್ ಮುಖಂಡ ಫಕ್ಕೀರೇಶ ಮ್ಯಾಟಣ್ಣವರ ಆಗ್ರಹಿಸಿದ್ದಾರೆ.




> ನಾಡಿನ ಭಕ್ತಗಣದ ಆಸ್ತಿಯಾಗಿರುವ ಶ್ರೀಗಳ ಮೇಲೆ ಆಗಾಗ ನಡೆಯುತ್ತಿರುವ ಸಂಚುಗಳ ಬಗ್ಗೆ ಪೊಲೀಸ್ ಇಲಾಖೆಗೆ ಸಂಪೂರ್ಣ ಮಾಹಿತಿ ಇದೆ. ಇತ್ತೀಚಿನ ದಿನಗಳಲ್ಲಿ ಈ ನಾಡಿನ ಅನೇಕ ಸ್ವಾಮೀಜಿಗಳು, ಸಂತರು, ಮುನಿಗಳು, ಸಾಹಿತಿಗಳು ಸೇರಿದಂತೆ ಪ್ರಭಾವಿಗಳ ಹತ್ಯೆ, ಹಲ್ಲೆ ನಡೆದಿರುವುದು ಗಮನಾರ್ಹ. ಇತ್ತೀಚಿನ ದಿನಗಳಲ್ಲಿ ಮಠದಲ್ಲಿನ ಆಸ್ತಿಗಳನ್ನು ಹಾಳು ಮಾಡುವುದು, ಅಪರಿಚಿತರು ಶ್ರೀಗಳ ಚಲನವಲನ ಗಮನಿಸುವುದು, ಭೀತಿ ಹುಟ್ಟಿಸುವ ಕೆಲಸ ಮಾಡುತ್ತಿರುವುದು ಭಕ್ತರಲ್ಲಿ ಆತಂಕ ಮೂಡಿಸಿದೆ.
> **– ಫಕ್ಕೀರೇಶ ಮ್ಯಾಟಣ್ಣವರ.** ಕಾಂಗ್ರೆಸ್ ಮುಖಂಡ, ಶ್ರೀಮಠದ ಭಕ್ತರು.

ಅವರು ಸೋಮವಾರ ಪಟ್ಟಣದ ಪತ್ರಿಕಾ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶ್ರೀ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು ಈ ನಾಡಿನ ಶ್ರೇಷ್ಠ ಪ್ರವಚನಕಾರರು, ಸಮಾಜ ಸುಧಾರಣೆ ಮತ್ತು ಧರ್ಮ ಪ್ರವರ್ತಕರೂ, ತ್ರಿವಿಧ ದಾಸೋಹಿಗಳೂ ▸▸ 3ನೇ ಪುಟಕ್ಕೆ

## ಸಚಿವ ಡಾ. ಎಚ್ ಕೆ ಪಾಟೀಲರಿಗೆ ಸನ್ಮಾನ



■ ವಿಜಯಸಾಕ್ಷಿ ಸುದ್ದಿ, ಗದಗ

ಕಾನೂನು, ಸಂಸದೀಯ ವ್ಯವಹಾರ, ಶಾಸನ ರಚನೆ, ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್ ಕೆ ಪಾಟೀಲರು ವಾರ್ಡ್ ನಂ.33 ಕಾಂಗ್ರೆಸ್ ಪಕ್ಷದ ಹಿರಿಯ ಧುರೀಣ, ನಗರಸಭೆಯ ಮಾಜಿ ಉಪಾಧ್ಯಕ್ಷ ಮೋಟಬಸಪ್ಪ ಶಲವಡಿಯವರ ನಿವಾಸಕ್ಕೆ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಿದರು. ಈ ಸಂದರ್ಭದಲ್ಲಿ ಮೋಟಬಸಪ್ಪ ಶಲವಡಿ, ಮಕ್ಕಳಾದ ವಿನಾಯಕ ಶಲವಡಿ ಹಾಗೂ ರಾಜು ಶಲವಡಿ ಸಚಿವ ಪಾಟೀಲರನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಗದಗ–ಬೆಟಗೇರಿ ನಗರಸಭೆಯ ಮಾಜಿ ಸದಸ್ಯ ಎಮ್ ಸಿ ಶೇಖ್, ಗಂಗಾಧರ್ ಹಿರೇಮಠ, ಬಿ ಪಿ ಹುಚ್ಚಣ್ಣವರ, ಎಮ್ ಆರ್ ಗಾಯಕವಾಡ, ಆನಂದ್ ಕುಲಕರ್ಣಿ, ಉಮೇಶ್ ಹಿರೇಮಠ, ಲಲಿತ್ ನಾಗಡ, ವೆಂಕಟೇಶ್ ಜಾಡರ್, ಕಳಕಪ್ಪ ಚಿನ್ನಪ್ಪಗೌಡರ್, ರಾಮು ಹುನಗುಂದ ಮುಂತಾದವರು ಉಪಸ್ಥಿತರಿದ್ದರು.

## ಮೂಲಭೂತ ಸೌಕರ್ಯ ಒದಗಿಸುವಂತೆ ಸಚಿವರಿಗೆ ಮನವಿ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್ ಕೆ ಪಾಟೀಲರು ಇಲ್ಲಿನ ಬಾಲಾಜಿ ಲೇಔಟ್, ಶಹಾ ಲೇಔಟ್, ಸೂರ್ಯನಗರ ಲೇಔಟ್, ಮೇಹರವಾಡೆ ಲೇಔಟ್, ಬಾಕಳೆ ಲೇಔಟ್‌ಗಳಿಗೆ ಭೇಟಿ ನೀಡಿ, ಸಾರ್ವಜನಿಕರ ಅಹವಾಲು ಸ್ವೀಕರಿಸಿದರು.

ಈ ಭಾಗಗಳಲ್ಲಿ ಮಳೆಗಾಲದಲ್ಲಿ ಮಾನ್ವಿ ಹಳ್ಳದ ನೀರು ಉಕ್ಕಿ ಹರಿದು, ಮನೆಗಳಿಗೆ ನುಗ್ಗಿ ತೊಂದರೆಯಾಗುತ್ತಿದೆ. ಹಳ್ಳದ ವಿಸ್ತಾರ ಹೆಚ್ಚಿಸಿ, ಸೇತುವೆಗಳನ್ನು ನಿರ್ಮಿಸಿಕೊಡುವಂತೆ ಕೋರಿದರು. ಈಗಾಗಲೇ ಇರುವ ಸೇತುವೆ ದುರ್ಬಲವಾಗಿದ್ದು, ಪರ್ಯಾಯ ಸೇತುವೆ ನಿರ್ಮಾಣ ಮಾಡಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವಂತೆ ವಿನಂತಿಸಿದರು.



ಅಲ್ಲದೆ, ಈ ಲೇಔಟ್‌ಗಳಲ್ಲಿ ಒಳಚರಂಡಿ, ರಸ್ತೆ, ಬೀದಿದೀಪದ ವ್ಯವಸ್ಥೆ, 24*7 ಕುಡಿಯುವ ನೀರಿನ ಸೌಲಭ್ಯವೂ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಜಿಲ್ಲಾ ವಿಕಾಸ ವೇದಿಕೆಯ ಅಧ್ಯಕ್ಷ ವಿಶ್ವನಾಥ ಖಾನಾಪೂರ ಹಾಗೂ ಸಾರ್ವಜನಿಕರು ಸಚಿವರಲ್ಲಿ ವಿನಂತಿಸಿದರು.

ಈ ಸಂದರ್ಭದಲ್ಲಿ ಲೇಔಟ್‌ನ ಕೃಷ್ಣಮೂರ್ತಿ ಬೇವಿನಕಟ್ಟಿ, ಶಶಿಧರ ಬಡಿಗೇರ, ಗವಿಸಿದ್ದಪ್ಪ ಬುಳ್ಳಾ, ಸುರೇಶ ಅಬ್ಬಿಗೇರಿಮಠ, ಶ್ಯಾಮ್ ಬೇವಿನಕಟ್ಟಿ, ಶ್ರೀನಿವಾಸ ಸಿದ್ಲಿಂಗ್, ಕೃಷ್ಣರೆಡ್ಡಿ ಉಪಸ್ಥಿತರಿದ್ದರು.

### ಅನ್ನಭಾಗ್ಯ ಯೋಜನೆ ನೇರ ನಗದು ವರ್ಗಾವಣೆಗೆ ಸಚಿವ ಎಚ್.ಕೆ.ಪಾಟೀಲ ಚಾಲನೆ

# ಹಸಿವುಮುಕ್ತ, ಸ್ವಾಭಿಮಾನದ ಬದುಕಿಗೆ ಅನ್ನಭಾಗ್ಯ ಆಸರೆ



> ಮನೆಯ ಪ್ರತಿ ಸದಸ್ಯರಿಗೆ 5 ಕೆ.ಜಿ. ಅಕ್ಕಿ, ಹಾಗೂ ಮೊತ್ತ 170 ರೂಗಳಂತೆ ನಮಗೆ 680 ರೂ. ಪ್ರತಿ ತಿಂಗಳು ಸಿಗಲಿದೆ ಇದರಿಂದ ನಾವು ಅಕ್ಕಿ, ಬೆಳೆ, ಸಕ್ಕರೆಯಂತಹ ಪಧಾರ್ಥಗಳನ್ನು ಖರೀದಿಸಲು ತುಂಬಾ ಸಹಕಾರಿಯಾಗಲಿದೆ. ಈ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಸಚಿವರಾದ ಎಚ್.ಕೆ.ಪಾಟೀಲ ಅವರಿಗೆ ತುಂಬು ಹೃದಯದ ಧನ್ಯವಾದಗಳು.
> **– ಯಾಕೂಬ. ಫಲಾನುಭವಿ**

> ಸಿ.ಎಮ್. ಸಿದ್ಧರಾಮಯ್ಯನವರು ನೀಡುವ ಅನ್ನಭಾಗ್ಯದ ಧನಭಾಗ್ಯದ ಹಣವು ಕುಟುಂಬಕ್ಕೆ ಅತ್ಯಂತ ಅನುಕೂಲಕರವಾಗಿದೆ. ನೆಮ್ಮದಿಯ ಜೀವನ ನಡೆಸಲು ಸಹಾಯ ಮಾಡಿದ ಸರ್ಕಾರಕ್ಕೆ ಕೃತಜ್ಞೆಗಳು.
> **–ಶರಣಮ್ಮ. ಫಲಾನುಭವಿ**

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಜನಸಾಮಾನ್ಯರ ಬದುಕು ಹಸನಾಗಬೇಕು, ಹಸಿವು ಮುಕ್ತವಾಗಬೇಕು, ನೆಮ್ಮದಿಯ ಹಾಗೂ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಅನ್ನಭಾಗ್ಯ ಯೋಜನೆ ಆಸರೆಯಾಗಿದೆ ಎಂದು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ನುಡಿದರು.

ಜಿಲ್ಲಾಡಳಿತ ಭವನದ ಅಡಿಟೋರಿಯಂ ಸಭಾಂಗಣದಲ್ಲಿ ರವಿವಾರ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮದಿಂದ ಅನ್ನಭಾಗ್ಯ ಯೋಜನೆ ನೇರ ನಗದು ವರ್ಗಾವಣೆ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹೇಳಿದ್ದನ್ನು ಸರಿಯಾಗಿ ಅನುಷ್ಠಾನ ಮಾಡುವ ಮೂಲಕ ನುಡಿದಂತೆ ಸರಕಾರ ನಡೆದಿದೆ. ರಾಜ್ಯದ ಜನಸಾಮಾನ್ಯರ ಹಸಿವು ನಿಗಿಸಿದ ಸಾರ್ಥಕ ಭಾವ ▸▸ 3ನೇ ಪುಟಕ್ಕೆ

## ಸಾಕ್ಷಿ ಸುಭಾಷಿತ

ನಿನ್ನ ಕರ್ತವ್ಯವನ್ನು ನೀನು ಪ್ರಾಮಾಣಿಕವಾಗಿ ಮಾಡು, ಮಿಕ್ಕಿದ್ದನ್ನು ದೇವರಿಗೆ ಬಿಡು.

–ಭಗವದ್ಗೀತೆ

## ಸಂಪಾದಕೀಯ

### ಚಳಿಗಾಲದ ಅಧಿವೇಶನಕ್ಕಾದರೂ ಪ್ರತಿಪಕ್ಷದ ನಾಯಕನ ಆಯ್ಕೆ ಆಗಲಿ

ಕರ್ನಾಟಕದ 16ನೇ ವಿಧಾನಮಂಡಲದ ಮೊದಲ ಅಧಿವೇಶನದ ಕೊನೆಯ ಭಾಗಕ್ಕೆ ಬಂದರೂ ಪ್ರತಿಪಕ್ಷದ ನಾಯಕನ ಆಯ್ಕೆ ಆಗಿಲ್ಲ.

ಪ್ರತಿಪಕ್ಷ ನಾಯಕನ ಹುದ್ದೆ ಎನ್ನುವುದು ಸಾಂವಿಧಾನಿಕ ಹುದ್ದೆ. ಕಳೆದ 33 ವರ್ಷಗಳ ಅವಧಿಯಲ್ಲಿ ಪ್ರತಿಪಕ್ಷದ ನಾಯಕನಿಲ್ಲದೆ ನಡೆದ ಮೊದಲ ಅಧಿವೇಶನವೂ ಇದಾಗಿದೆ. ಅಲ್ಲದೇ ಸಂವಿಧಾನಿಕ ಹುದ್ದೆಯೊಂದು ಸುಧೀರ್ಘ ಅವಧಿಗೆ ಖಾಲಿ ಇರುವುದು ಸಂವಿಧಾನಕ್ಕೆ ಮಾಡಿದ ಅಪಮಾನ ಎನ್ನಬಹುದು.

ಪ್ರತಿಪಕ್ಷ ನಾಯಕನ ಹುದ್ದೆ ಮುಖ್ಯಮಂತ್ರಿ ಹುದ್ದೆಯಷ್ಟೇ ಪ್ರಾಮುಖ್ಯತೆ ಹೊಂದಿದೆ. ಆಡಳಿತ ನಡೆಸಲು ಸಾಧ್ಯವಿಲ್ಲ ಎನ್ನುವುದನ್ನು ಬಿಟ್ಟರೆ ಅತ್ಯಂತ ಪ್ರಭಾವಿ ಹುದ್ದೆಯೂ ಹೌದು. ಆದರೆ ಮುಖ್ಯಮಂತ್ರಿ ಗಾದಿಯಂತೂ ಅಲ್ಲ. ಆದರೂ ಪ್ರತಿಪಕ್ಷ ನಾಯಕನ ಆಯ್ಕೆ ವಿಚಾರದಲ್ಲಿ ಬಿಜೆಪಿ ಮುಖ್ಯಮಂತ್ರಿ ಆಯ್ಕೆ ರೀತಿ ನಡೆದುಕೊಳ್ಳುತ್ತಿರುವುದು ನೋಡಿದರೆ ಸಾಕಷ್ಟು ಅನುಮಾನಗಳು ಕಾಡುತ್ತಿವೆ.

ಮುಖ್ಯವಾಗಿ ಪ್ರತಿಪಕ್ಷ ನಾಯಕನ ಸ್ಥಾನ ವಹಿಸಿಕೊಳ್ಳುವಂತಹ ಸಾಮರ್ಥ್ಯ ಇರುವ ನಾಯಕರು ಆ ಪಕ್ಷದಲ್ಲಿ ಇಲ್ಲ ಎನ್ನುವುದು ಸಾಬೀತಾಗುತ್ತದೆ. ಇದ್ದರೂ ಅವರಿಗೆ ಆ ಸ್ಥಾನಮಾನಗಳನ್ನ ಕೊಡಲು ಯಾಕೆ ಹಿಂದೇಟು ಹಾಕಲಾಗುತ್ತಿದೆ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ.

ಬಜೆಟ್ ಅಧಿವೇಶನ ಇನ್ನು ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲಿದೆ. ಬಜೆಟ್ ಪೂರ್ವದಲ್ಲಿ ಪ್ರತಿಪಕ್ಷ ನಾಯಕನ ಆಯ್ಕೆ ಸಾಕಷ್ಟು ಕಸರತ್ತು ನಡೆದಿತ್ತು. ಕಾಂಗ್ರೆಸ್ ನಾಯಕರ ಟೀಕೆಗಳಿಗೆ ಸೂಕ್ತ ಪ್ರತ್ಯುತ್ತರ ಇಲ್ಲದೇ ಬಿಜೆಪಿ ಮುಜುಗರ ಅನುಭವಿಸಿತ್ತು.

ಈ ಮಧ್ಯೆ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಮಾಡಿಕೊಂಡು ಕುಮಾರಸ್ವಾಮಿ ಅವರನ್ನು ಪ್ರತಿಪಕ್ಷ ನಾಯಕನಾಗಿ ಮಾಡಲಾಗುತ್ತದೆ ಎನ್ನುವ ವದಂತಿಯೂ ಹಬ್ಬಿತ್ತು. ಒಂದೊಮ್ಮೆ ವದಂತಿ ನಿಜವಾಗಿ, ಕುಮಾರಸ್ವಾಮಿ ಪ್ರತಿಪಕ್ಷ ನಾಯಕನಾದರೂ ಬಿಜೆಪಿಗೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು.

ಸದ್ಯಕ್ಕೆ ಪ್ರತಿಪಕ್ಷ ನಾಯಕನ ಆಯ್ಕೆಗೆ ಜಾತಿ ಲೆಕ್ಕಾಚಾರ ಬಿಟ್ಟು ಬಿಜೆಪಿ ಸಮರ್ಥ ನಾಯಕನ ಆಯ್ಕೆಗೆ ಮುಂದಾಗಬೇಕು. ಪ್ರತಿಯೊಂದು ನಡೆಯನ್ನು ಮತ ರಾಜಕಾರಣದ ಜೊತೆಗೆ ಸಮೀಕರಣ ಮಾಡಿದಲ್ಲಿ ಭವಿಷ್ಯದಲ್ಲಿ ಬಿಜೆಪಿ ಹೆಚ್ಚು ನಷ್ಟ ಅನುಭವಿಸಬೇಕಾಗುತ್ತದೆ. ಚಳಿಗಾಲದ ಅಧಿವೇಶನಕ್ಕಾದರೂ ಬಿಜೆಪಿ ಪ್ರತಿಪಕ್ಷ ನಾಯಕನ ಆಯ್ಕೆ ಮಾಡಿಕೊಳ್ಳುವತ್ತ ಗಮನ ಹರಿಸಲಿ.




ಧಾರವಾಡದ ಪುಟಾಣಿ ವಿಶ್ವಕೀರ್ತಿ ಜಿ ಕಾಂಬ್ಳೆ ಕನ್ನಡ ಭಾಷೆಯಲ್ಲಿ 100 ಸಾಮಾನ್ಯ ಜ್ಞಾನದ ಪ್ರಶ್ನೆಗಳಿಗೆ ವೇಗವಾಗಿ ಉತ್ತರಿಸುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ಜೂನ್ 2, 2023ರಂದು ದೃಢಪಡಿಸಿದಂತೆ ಅವರು 6 ವರ್ಷ, 4 ತಿಂಗಳು ಮತ್ತು 25 ದಿನಗಳ ವಯಸ್ಸಿನಲ್ಲಿ 3 ನಿಮಿಷ 41 ಸೆಕೆಂಡುಗಳಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ 100 ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್–2023ರಲ್ಲಿ ದಾಖಲೆ ನಿರ್ಮಿಸಿದ್ದಾರೆ.



ಗದಗ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಅಖಿಲ ಕರ್ನಾಟಕ ಸಾಂಸ್ಕೃತಿಕ ಪರಿಷತ್ ವತಿಯಿಂದ ರವಿವಾರ ನಡೆದ ರಾಜ್ಯ ಮಟ್ಟದ ಅಖಿಲ ಭಾರತ 6ನೇ ಸಾಂಸ್ಕೃತಿಕ ಸಮ್ಮೇಳನದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ಗದಗ ಜಿಲ್ಲಾಧ್ಯಕ್ಷ ಬಸಲಿಂಗಪ್ಪ ಮುಂಡರಗಿ ಅವರನ್ನು ಸತ್ಕರಿಸಲಾಯಿತು. ಮಲ್ಲಿಕಾರ್ಜುನ ಕೊರಕನವರ, ಸಂಗಪ್ಪ ಗೊಂದಿ, ವಿಜಯ ಬಡಿಗೇರ, ನಿಂಗಪ್ಪ ಚೋರಗಸ್ತಿ, ಇಂದಿರಾ ಹೆಬಸೂರ, ಸುನಂದಾ ವಾಡ್ಕರ್, ಪರಿಮಳ ದಾಸರ ಸೇರಿ ಅನೇಕರು ಇದ್ದರು.

### ಬಸವದಳದ ಶರಣ ಸಂಗಮ ಕಾರ್ಯಕ್ರಮದಲ್ಲಿ ಅಶೋಕ ಬರಗುಂಡಿ ನುಡಿ

# ಲಿಂಗಾಯತ ತತ್ವದ ಏಳಿಗೆಗಾಗಿ ಜೀವನ ಮೀಸಲಿಟ್ಟ ಮಹಾಶರಣ

■ವಿಜಯಸಾಕ್ಷಿ ಸುದ್ದಿ, ಗದಗ

ತಮ್ಮ ಧರ್ಮದ ಅಸ್ಮಿತೆಯ ಪರಿಕಲ್ಪನೆಯಿಲ್ಲದೆ, ಸಂಪ್ರದಾಯವಾದಿಗಳಿಂದ ಶೋಷಣೆಗೆ ಒಳಗಾಗಿದ್ದ ಲಿಂಗಾಯತ ಧರ್ಮೀಯರಿಗೆ ಶರಣ ಸಂಸ್ಕೃತಿಯ ಧೀಮಂತಿಕೆಯ ಪರಿಚಯ ಮಾಡಿಸಿದ ಡಾ. ಫ ಗು ಹಳಕಟ್ಟಿಯವರು ಲಿಂಗಾಯತರಿಗೆ ಸ್ವಾಭಿಮಾನದ ಬದುಕು ಕಲ್ಪಿಸಿಕೊಟ್ಟ ಮಹಾನ್ ಶರಣರು ಎಂದು ವಿಚಾರವಾದಿ ಅಶೋಕ ಬರಗುಂಡಿ ನುಡಿದರು.

ಅವರು ರವಿವಾರ ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಜರುಗಿದ ಬಸವದಳದ 1550ನೇ ಶರಣ ಸಂಗಮ ಕಾರ್ಯಕ್ರಮದಲ್ಲಿ ಡಾ. ಫ ಗು ಹಳಕಟ್ಟಿಯವರ ಜನ್ಮದಿನದ ಅಂಗವಾಗಿ ಅವರ ಜೀವನ–ಸಾಧನೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಮೂಲತಃ ವಿಜ್ಞಾನದ ವಿದ್ಯಾರ್ಥಿಗಳಾಗಿದ್ದ ಹಳಕಟ್ಟಿಯವರಿಗೆ ಬಸವಪುರಾಣ, ಚೆನ್ನಬಸವ ಪುರಾಣಗಳನ್ನು ಓದಿದಾಗ ಯಾವುದೇ ತಿರುಳು ಸಿಗದೇ ಭ್ರಮನಿರಸನವಾಯಿತು.



ಅಂದಿನಿಂದಲೇ ಅವರು ವಚನ ಸಾಹಿತ್ಯದ ಸಂಶೋಧನೆಯಲ್ಲಿ ನಿರತರಾದರು. ಮುಂದೆ ಸುಖಮಯ ಜೀವನ ನಡೆಸಬಹುದಾಗಿದ್ದ ವಕೀಲಿ ವೃತ್ತಿಯನ್ನು ಕೈಬಿಟ್ಟು ಲಿಂಗಾಯತ ತತ್ವದ ಏಳಿಗೆಗಾಗಿ ಜೀವನ ಮೀಸಲಿಟ್ಟವರು ಎಂದರು.

> ಹಳಕಟ್ಟಿಯವರು ತಮ್ಮ ಮನೆಯನ್ನು ಮಾರಿ, ಹಿತಚಿಂತಕ ಎಂಬ ಮುದ್ರಣಾಲಯವನ್ನು ಸ್ಥಾಪಿಸಿ, ಅದರ ಮೂಲಕ ಶಿವಾನುಭವ ಪತ್ರಿಕೆ ಸೇರಿದಂತೆ ಅನೇಕ ಮಹತ್ವದ ಗ್ರಂಥಗಳನ್ನು ಪ್ರಕಟಿಸಿದರು. ಲಿಂಗಾಯತರ ಭವ್ಯ ಪರಂಪರೆಯನ್ನು ಮತ್ತೆ ಮುನ್ನೆಲೆಗೆ ತಂದ ಹಳಕಟ್ಟಿಯವರು ಬಸವಾದಿ ಶರಣರ ಸಾಲಿನಲ್ಲಿ ಸೇರಬಲ್ಲ ಮಹಾತ್ಮರು.
>
> – ಅಶೋಕ ಬರಗುಂಡಿ.

ಶರಣ ಬಿ ವ್ಹಿ ಕಾಮಣ್ಣವರ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳ ಕುರಿತು ಉಪನ್ಯಾಸ ನೀಡಿ, ಲಿಂಗಾನಂದ ಸ್ವಾಮಿಗಳು ರಾಷ್ಟ್ರೀಯ ಬಸವದಳಗಳನ್ನು ಸ್ಥಾಪಿಸಿ ಬಸವತತ್ವದ ವ್ಯಾಪಕ ಪ್ರಚಾರಕ್ಕೆ ಕಾರಣರಾದರು.

ಬಸವತತ್ವದ ನಿಜಾಚರಣೆಗಳ ಕುರಿತು ಪ್ರಖರವಾದ ಪ್ರವಚನಗಳನ್ನು ನೀಡುತ್ತಿದ್ದ ಅವರು, ಮೊಟ್ಟಮೊದಲ ಬಾರಿಗೆ ಶರಣ ಸಮ್ಮೇಳನವನ್ನು ನಡೆಸಿ ಲಿಂಗಾಯತರ ಸಂಘಟನೆಗೆ ದಾರಿ ಮಾಡಿಕೊಟ್ಟರು. ಮಹಿಳಾ ಜಗದ್ಗುರು ಪೀಠ ಸ್ಥಾಪಿಸುವ ಮೂಲಕ ಕ್ರಾಂತಿಕಾರಿ ಹೆಜ್ಜೆಯನ್ನು ಇಟ್ಟ ಅವರು, ಲಿಂಗತತ್ವದರ್ಪಣ, ವಚನ ದರ್ಶನ ಮುಂತಾದ ಗ್ರಂಥಗಳನ್ನು ರಚಿಸಿದರು. ಪೂಜ್ಯರು ನಾಡಿನಲ್ಲಿ ಬಸವಧರ್ಮದ ಏಳಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಬಸವದಳದ ಅಧ್ಯಕ್ಷ ವಿ ಕೆ ಕರೇಗೌಡ್ರ ಅಧ್ಯಕ್ಷತೆ ವಹಿಸಿದ್ದರು. ಷಣ್ಮುಖ ಕೊರನಳ್ಳಿ ಲಿಂಗಾನಂದ ಶ್ರೀಗಳ ಕುರಿತು ಗೀತಗಾಯನ ನಡೆಸಿದರು. ಮಂಜುಳಾ ಹಾಸಲಕರ ನಿರೂಪಿಸಿದರೆ, ಎಸ್ ಬಿ ಸೋಮಗೊಂಡ ಸ್ವಾಗತಿಸಿದರು. ಪ್ರಕಾಶ ಅಸುಂಡಿ ಶರಣ ಸಮರ್ಪಣೆಗೈದರು. ಬಸವದಳದ ಸದಸ್ಯರು, ಪದಾಧಿಕಾರಿಗಳು, ಬಸವಾಭಿಮಾನಿಗಳು ಇದ್ದರು.

### ಶ್ರೀ ಅನ್ನದಾನೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ವಿಶ್ವವಿದ್ಯಾಲಯ ಮಟ್ಟದ ಕಾರ್ಯಕ್ರಮ

# ನಾಯಕತ್ವ ತರಬೇತಿ ಶಿಬಿರ ಇಂದಿನಿಂದ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಇಂದು, ಜುಲೈ 18ರಿಂದ ಜು.24ರವರೆಗೆ ಏಳು ದಿನಗಳ ಕಾಲ ನರೇಗಲ್ಲದ ಶ್ರೀ ಅನ್ನದಾನೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ವಿಶ್ವವಿದ್ಯಾಲಯ ಮಟ್ಟದ ನಾಯಕತ್ವ ತರಬೇತಿ ಶಿಬಿರ ಜರುಗಲಿದೆ ಎಂದು ಮಹಾವಿದ್ಯಾಲಯದ ಪ್ರಾಚಾರ್ಯ ಎಸ್ ಜಿ ಕೇಶಣ್ಣವರ ಹೇಳಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ಮಂಗಳವಾರ ಸಾಯಂಕಾಲ 4.30ಕ್ಕೆ ಮಹಾವಿದ್ಯಾಲಯದ ಸಭಾಂಗಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಜ. ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಕರ್ನಾಟಕ ವಿಶ್ವದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಡಾ. ಎಂ ಬಿ ದಳಪತಿ ಶಿಬಿರವನ್ನು



ಉದ್ಘಾಟಿಸಲಿದ್ದಾರೆ. ಕಾಲೇಜು ಸಮಿತಿಯ ಅಧ್ಯಕ್ಷ ಬಸವರಾಜ ವೀರಾಪೂರ ಅಧ್ಯಕ್ಷತೆ ವಹಿಸಲಿದ್ದಾರೆ.

ಅಧ್ಯಯನ ಮಾಡುವಾಗಲೇ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳು ಮೂಡಲಿ ಎಂಬ ಸದುದ್ದೇಶದಿಂದ ಬಹುತೇಕ ಎಲ್ಲ ಮಹಾವಿದ್ಯಾಲಯಗಳಲ್ಲಿ ಎನ್‌ಎಸ್‌ಎಸ್ ಕ್ಯಾಂಪ್‌ಗಳನ್ನು ಏರ್ಪಡಿಸಲಾಗುತ್ತಿದೆ.

ಅದರ ಒಂದು ಭಾಗವಾಗಿ ಈ ಸಾರೆ ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದ ನಾಯಕತ್ವ ತರಬೇತಿ ಶಿಬಿರವನ್ನು ನಮ್ಮ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದು, ನಾಲ್ಕು ಜಿಲ್ಲೆಗಳ ವಿವಿಧ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಂಡು ಪ್ರಯೋಜನ ಪಡೆಯಲಿದ್ದಾರೆ ಎಂದರು.

ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಡಾ. ಕಲ್ಲಯ್ಯ ಹಿರೇಮಠ ಮಾತನಾಡಿ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ, ಆಡಳಿತಾಧಿಕಾರಿ ಎನ್ ಆರ್ ಗೌಡರ, ಆಡಳಿತ ಮಂಡಳಿಯ ಸದಸ್ಯರಾದ ವಿ ವಿ ವಸ್ತ್ರದ, ಸೋಮಣ್ಣ ಹರ್ಲಾಪೂರ ಮತ್ತು ನಿವೃತ್ತ ಪ್ರಾಚಾರ್ಯ ಬಿ ಎಫ್ ಚೇಗರೆಡ್ಡಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ವಿಶೇಷ ಆಹ್ವಾನಿತರಾಗಿ ರಾಷ್ಟ್ರೀಯ ಸೇವಾ ಯೋಜನೆಯ ಜಿಲ್ಲಾ ನೋಡಲ್ ಅಧಿಕಾರಿ ವಿ ಎಚ್ ಕೊಳ್ಳಿಯವರು ಭಾಗವಹಿಸಲಿದ್ದಾರೆ. ಈ ಎಲ್ಲ ಕಾರ್ಯಕ್ರಮಗಳು ರಾಷ್ಟ್ರೀಯ ಸೇವಾ ಯೋಜನಾ ಕೋಶ ಕವಿವಿ ಧಾರವಾಡ, ಶ್ರೀ ಅನ್ನದಾನೇಶ್ವರ ಪದವಿ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಕೇಂದ್ರ ನರೇಗಲ್ಲ ಇವುಗಳ ಸಂಯುಕ್ತ ಆಶ್ರಯದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಜರುಗಲಿವೆ ಎಂದರು.

> ಗುರುವಾರ ಸಂಜೆ 6ಕ್ಕೆ ಮಹಿಳಾ ಗೋಷ್ಠಿ ನಡೆಯಲಿದ್ದು, ಗದುಗಿನ ಖ್ಯಾತ ಭಾಷಣಗಾರ್ತಿ, ನಿವೃತ್ತ ಉಪನ್ಯಾಸಕಿ ಕವಿತಾ ಕಾಶಪ್ಪನವರ, ಜಯಶ್ರೀ ಬಂಢಾರಿ ಮತ್ತು ನಿವೃತ್ತ ಉಪನ್ಯಾಸಕಿ ಶಾರದಾ ಮೇಟಿ ಪಾಲ್ಗೊಳ್ಳಲಿದ್ದಾರೆ. ಇದೇ ಸಂದರ್ಭದಲ್ಲಿ ಜಮ್ಮು–ಕಾಶ್ಮೀರದ ಲಕ್ಕಿ ಗುಪ್ತಾ ಎನ್ನುವ ಕಲಾವಿದರಿಂದ ಗುರು–ಶಿಷ್ಯರ ಬಾಂಧವ್ಯವನ್ನು ಸಾರುವ ಸೋಲೋ ಕಾರ್ಯಕ್ರಮ ಜರುಗಲಿದೆ. ಗದಗ, ಹಾವೇರಿ, ಧಾರವಾಡ ಮತ್ತು ಕಾರವಾರ ಜಿಲ್ಲೆಗಳಿಂದ ಸುಮಾರು 200 ವಿದ್ಯಾರ್ಥಿಗಳು ಈ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಕೇಶಣ್ಣವರ ಮಾಹಿತಿ ನೀಡಿದರು.

ವಿದ್ಯಾರ್ಥಿಗಳಿಗೆ ಭಾಷಣದ ಕಲೆಯನ್ನು ಪರಿಚಯಿಸುವುದರ ಜೊತೆಗೆ ಹಾಸ್ಯ ಪ್ರಜ್ಞೆಯನ್ನು ಮೂಡಿಸುವ ಸಲುವಾಗಿ ಜು.19ರಂದು ಸಂಜೆ 6ಕ್ಕೆ ನಗೆಹಬ್ಬ ಕಾರ್ಯಕ್ರಮ ಏರ್ಪಡಿಸಲಾಗಿದೆ. ನಿವೃತ್ತ ಪ್ರಾಚಾರ್ಯ ಅನಿಲ ವೈದ್ಯ ಮತ್ತು ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ ಕುಲಕರ್ಣಿ ಈ ನಗೆ ಹಬ್ಬ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ.

ನಂತರ ಜಾನಪದ ಕಲಾವಿದ ಗವಿಸಿದ್ದಯ್ಯ ಹಳ್ಳಿಕೇರಿಮಠ ಅವರಿಂದ ಜಾನಪದ ಗಾಯನ ಕಾಯಕ್ರಮ ಜರುಗಲಿದೆ ಎಂದು ಪ್ರಾಚಾರ್ಯ ಕೇಶಣ್ಣವರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪನ್ಯಾಸಕ ಜಿ ಜಿ ಕೋಟಿ, ಜಿಮಖಾನ ಚೇರಮನ್ ಡಾ. ಡಿ ಎಲ್ ಪವಾರ, ದೈಹಿಕ ನಿರ್ದೇಶಕ ಎಸ್ ಬಿ ಗೌಡರ ಹಾಜರಿದ್ದರು.

## ಎಂಜಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನೋಟ್‌ಬುಕ್ ವಿತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಸರ್ಕಾರಿ ಹಿರಿಯ ಉರ್ದು ಗಂಡು ಮಕ್ಕಳ ಶಾಲೆ ನಂ.7, ಎಸ್ ಎಂ ಕೃಷ್ಣ ನಗರದಲ್ಲಿ ಎಂ ಜಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನೋಟ್‌ಬುಕ್ ವಿತರಿಸಲಾಯಿತು. ಈ ಸಂದರ್ಭದಲ್ಲಿ ಟ್ರಸ್ಟ್‌ನ ಕಾರ್ಯದರ್ಶಿ ಮೌಲಾನಾ ಅಬ್ದುಲ್ ಗಫೂರ್ ಪಲ್ಲೇದ ಮಾತನಾಡಿ, ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವ ಏಕೈಕ ವಿದ್ಯೆಯೆಂದರೆ ಅದು ಶಿಕ್ಷಣ. ಶಿಕ್ಷಣವಿಲ್ಲದವರು ಮೃಗಗಳಿಗಿಂತ ಕೀಳು. ಒಳ್ಳೆಯ ಶಿಕ್ಷಣ ಪಡೆದು ಸಮಾಜದ ಅತ್ಯುನ್ನತ ಸ್ಥಾನ ಅಲಂಕರಿಸಿ ಮಾನವೀಯತೆಗಾಗಿ ಕೆಲಸ ಮಾಡುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಎಂ ಜಿ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಮಕ್ತುಮಸಾಬ್ ನಾಯಕ್, ಅಬೂಹುರೇರಾ ಮಸ್ಜಿದ್ ಗಂಗಿಮಡಿಯ ಕಾರ್ಯದರ್ಶಿ ಮಹಮ್ಮದ್ ಸಾಬ್ ಬೊದ್ಲೆಖಾನ್, ಚಾಂದ ಸಾಬ ಅಬ್ಬಿಗೇರಿ, ದಾವೂದ್ ಕುರಹಟ್ಟಿ, ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ಸಿಬ್ಬಂದಿ ವರ್ಗ, ಹಾಗೂ ಎಸ್‌ಡಿಎಂಸಿ ಅಧ್ಯಕ್ಷರು ಹಾಜರಿದ್ದರು.



## ಅಪ್ರಾಪ್ತಳ ಮೇಲೆ ಅತ್ಯಾಚಾರ ಆರೋಪಿಗೆ 20 ವರ್ಷ ಜೈಲು ಶಿಕ್ಷೆ

■ವಿಜಯಸಾಕ್ಷಿ ಸುದ್ದಿ, ಗದಗ

ಅಪ್ರಾಪ್ತ ಬಾಲಕಿ ಮೇಲೆ ಹೊಡಿ–ಬಡಿ ಮಾಡಿ ಅತ್ಯಾಚಾರ ಮಾಡಿದ್ದ ಆರೋಪಿತನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಗದಗ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ 20 ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.

ಪ್ರಕರಣದ ಆರೋಪಿ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಗುಡ್ಡದ ಮಲ್ಲಾಪೂರ ಗ್ರಾಮದ ಶಂಕರಗೌಡ ತಂದೆ ಶೇಖರಗೌಡ ಪಾಟೀಲ್ ಎಂಬಾತ ರೋಣ ಪೊಲೀಸ್ ಠಾಣಾ ವ್ಯಾಪ್ತಿಯ ಜಮೀನಿನಲ್ಲಿ 05–09–2019 ರಂದು ನೊಂದ ಬಾಲಕಿ ಕುಡಿಯಲು ನೀರು ತರಲು ಹೋಗುವಾಗ ಆರೋಪಿ ಶಂಕರಗೌಡ, ಬಾಲಕಿಯನ್ನು ಜಮೀನಿನ ಒಳಗಡೆ



ಎಳೆದುಕೊಂಡು ಹೋಗಿ ಹೊಡಿ–ಬಡಿ ಮಾಡಿ ಅತ್ಯಾಚಾರ ಮಾಡಿದ್ದ.

ಈ ಕುರಿತು ಗದಗ ಜಿಲ್ಲೆಯ ರೋಣ ಪೊಲೀಸ್ ಠಾಣೆಯಲ್ಲಿ ಗುನ್ನಾ ನಂ.129/2019 ಕಲಂ 323–376(2 (ಐ), 376(3)–504–506 ಐಪಿಸಿ ಕಲಂ 4&6ಪೋಕ್ಸೋ ಕಾಯ್ದೆ 2012 ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ಸದರಿ ಪ್ರಕರಣದಲ್ಲಿ ಅಂದಿನ ಸಿಪಿಐ ಎಮ್. ಐ. ನಡುವಿನಮನಿ ಅವರು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಿ ದೋಷಾರೋಪಣೆ ಪಟ್ಟಿಯನ್ನು ದಿ. 22–10–2019 ರಂದು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಈ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ನಡೆದು ಆರೋಪಿ ಮಾಡಿದ ಅಪರಾಧ ರುಜುವಾತಾಗಿರುವುದರಿಂದ ಸದರಿ ಆರೋಪಿ ಶಂಕರಗೌಡನಿಗೆ 20 ವರ್ಷ ಜೈಲು ಶಿಕ್ಷೆ ವಿಧಿಸಿ ಮಾನ್ಯ ಅಪರ್ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರಾಜೇಶ್ವರ ಶೆಟ್ಟಿ ಅವರು ಆದೇಶ ಹೊರಡಿಸಿದ್ದಾರೆ.

ಸರಕಾರದ ಪರವಾಗಿ ವಿಶೇಷ ಸರಕಾರಿ ಅಭಿಯೋಜಕರಾದ ಅಮರೇಶ ಉಮಾಪತಿ ಹಿರೇಮಠ ಅವರು ವಾದ ಮಂಡಿಸಿದ್ದರು.

### ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಚಿವ ಎಚ್ ಕೆ ಪಾಟೀಲ

# ದಲಿತರ ಅಭ್ಯುದಯಕ್ಕಾಗಿ ಕಾಯ್ದೆ ತಿದ್ದುಪಡಿ



> ಶಿಕ್ಷಣದಿಂದ ನಿಮ್ಮ ಬದುಕನ್ನು ರೂಪಿಸಿಕೊಳ್ಳಬೇಕು. ಬಿ ಆರ್ ಅಂಬೇಡ್ಕರರು ದಿನದ ಹದಿನೆಂಟು ಗಂಟೆಗಳ ಕಾಲ ಓದುತ್ತಿದ್ದರು. ಈ ಪ್ರೇರಣೆ ನಿಮ್ಮಲ್ಲಿ ಬರಬೇಕು. ಪಠ್ಯ–ಪುಸ್ತಕಕ್ಕೆ ಸಿಮೀತವಾಗದೇ ಪಠ್ಯೇತರ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಆಗ ಪ್ರಪಂಚ, ದೇಶ, ನಮ್ಮೂರು ನಮ್ಮ ಸುತ್ತ–ಮುತ್ತಲಿರುವ ಸಮಾಜವನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.
>
> – ಎಫ್ ಎಚ್ ಜಕ್ಕಪ್ಪನವರ.

■ವಿಜಯಸಾಕ್ಷಿ ಸುದ್ದಿ, ಗದಗ

ಸಂವಿಧಾನಕ್ಕೆ ಆಪತ್ತು ಬಂದಾಗ ಎಲ್ಲ ದಲಿತ ಸಂಘಟನೆಗಳು ಸಂವಿಧಾನ ಉಳಿವಿಗಾಗಿ ಹೋರಾಟ ಮಾಡಿದ್ದರ ಪರಿಣಾಮವಾಗಿ, ಇಂದು ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಿದೆ. ಪಿಟಿಸಿಎಲ್ ಕಾಯ್ದೆಯಲ್ಲಿ ದಲಿತರಿಗೆ ಅನ್ಯಾಯವಾಗುತ್ತಿತ್ತು. ಈಗ ನಾವು ದಲಿತರ ಭೂಮಿ ಉಳಿವಿಗಾಗಿ ಇಡೀ ಪಿಟಿಸಿಎಲ್ ಕಾಯ್ದೆಯನ್ನು ತಿದ್ದುಪಡಿ ಮಾಡುತ್ತಿದ್ದೇವೆ ಎಂದು ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ನುಡಿದರು.

ಪಟ್ಟಣದ ತೋಂಟದಾರ್ಯ ಕಲ್ಯಾಣ ಮಂಟಪದಲ್ಲಿ ಡಾ. ಬಿ ಆರ್ ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿ ವತಿಯಿಂದ 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಬಂಡಾಯ ಸಾಹಿತಿ ಬಸವರಾಜ ಸೂಳಿಭಾವಿ ಮಾತನಾಡಿ, ಭಾರತದಲ್ಲಿ ಎಲ್ಲ ಧರ್ಮದವರು ಕೂಡಿ ಬದುಕುತ್ತಿದ್ದಾರೆ. ಇಂದು ಕೆಲವರು ಆ ಬಹುತ್ವವನ್ನು ಹಾಳು ಮಾಡಲು ಹೊರಟಿದ್ದಾರೆ. ಅವರಿಂದ ರಕ್ಷಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಬರಹಗಾರರಾದ ಡಾ. ವಿಠ್ಠಲ ವಗ್ಗನ್ ಮಾತನಾಡಿ, ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಇಂತಹ ಶೋಷಣೆಗಳ ವಿರುದ್ಧ ಧ್ವನಿಯೆತ್ತಬೇಕು, ಪ್ರಶ್ನಿಸಬೇಕು, ಪ್ರತಿಭಟಿಸಬೇಕು. ಈ ಧೈರ್ಯ ಬರಬೇಕಾದರೆ ಶಿಕ್ಷಣ ಪಡೆಯಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಡಿಎಸ್‌ಎಸ್ ಜಿಲ್ಲಾಧ್ಯಕ್ಷ ಶಿವಾನಂದ ತಮ್ಮಣ್ಣವರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಾಸಕ ಎನ್ ಎಚ್ ಕೋನರೆಡ್ಡಿ, ತೊಂಟದಾರ್ಯ ಮಠದ ಆಡಳಿತಾಧಿಕಾರಿ ಎಸ್ ಎಸ್ ಪಟ್ಟಣಶೆಟ್ಟಿ, ಹಿರಿಯರಾದ ಎಸ್ ಎನ್ ಬಳ್ಳಾರಿ, ವಿರುಪಾಕ್ಷಪ್ಪ ರಾಮಗಿರಿ, ಶೇಖಪ್ಪ ತಮ್ಮಣ್ಣವರ, ಪ್ರಕಾಶ ಕಾಳೆ, ಬಸವರಾಜ ಕಡೆಮನಿ ಮಾರ್ತಾಂಡಪ್ಪ ಹಾದಿಮನಿ, ಆನಂದ ಶಿಂಗಾಡಿ, ಸಿದ್ದಪ್ಪ ಲಿಂಗದಾಳ, ಬಾಲರಾಜ ಅರಬರ, ರಮೇಶ ಬಾಳಮ್ಮನವರ, ಬಸವರಾಜ ಬೇವಿನಮರದ, ಶರೀಫ ಬಿಳೆಯಲಿ, ಮುತ್ತು ಬಿಳೆಯಲಿ, ಮಂಜುನಾಥ ಗೊಂದಿ, ಅನಿಲ್ ಕಾಳೆ, ಪರಶು ಕಾಳೆ, ಬಸವರಾಜ ಬೀಳೆಯಲಿ, ಹನುಮಂತ ಚಲವಾದಿ, ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

## 500 ಹಳೆಯ ಕೆಎಸ್‌ಆರ್‌ಟಿಸಿ ಬಸ್ಸುಗಳಿಗೆ ನವೀಕರಣ; ಹೊಸ ಅವತಾರ!

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಸ ಬಸ್‌ಗಳನ್ನು ಖರೀದಿಸಿ ಸೇವೆಗೆ ನಿಯೋಜಿಸುವ ಯೋಜನೆ ಹೊಂದಿದ್ದರೂ, ಹಳೆಯ ಬಸ್ಸುಗಳಿಗೆ ಮರುಜೀವ ನೀಡಲು ಮುಂದಾಗಿದೆ. ನಿಗಮದ ಹಳೆಯ ಬಸ್‌ಗಳನ್ನು ನವೀಕರಿಸಲು ತನ್ನ ಬಸ್ ಡಿಪೋಗಳಿಗೆ ಜವಾಬ್ದಾರಿ ವಹಿಸಿದೆ.

ಕೆಎಸ್‌ಆರ್‌ಟಿಸಿ ಎಂಡಿ ಅನ್ಬು ಕುಮಾರ್ ಟಿಎನ್‌ಐಇ ಜೊತೆಗೆ ಮಾತನಾಡಿ, 10 ಲಕ್ಷ ಕಿಮೀ ಕ್ರಮಿಸಿದ ಸುಮಾರು 500 ಬಸ್‌ಗಳನ್ನು ಈಗ ನವೀಕರಿಸಲಾಗಿದೆ. ಅವು ಈಗ ಹೊಚ್ಚಹೊಸ ಬಸ್‌ಗಳಾಗಿ ಕಾಣುತ್ತಿವೆ ಎಂದು ಹೇಳಿದ್ದಾರೆ.

'ಹೊಸ ಬಸ್‌ನ ಬೆಲೆ ಸುಮಾರು 40 ಲಕ್ಷ ರೂಪಾಯಿ. ಆದರೆ, ನಮ್ಮ ಸಿಬ್ಬಂದಿ ಕೇವಲ 3 ಲಕ್ಷ ರೂಪಾಯಿಗಳಿಗೆ ಹಳೆಯ ಬಸ್‌ಗಳನ್ನು ನವೀಕರಿಸುತ್ತಿದ್ದಾರೆ. ಬಸ್‌ಗಳಿಗೆ ಹೊಸ ಅವತಾರ ಸಿಕ್ಕಿದೆ. ಕೋವಿಡ್ ಸಮಯದಲ್ಲಿ ನಿಗಮವು ಭಾರಿ ನಷ್ಟವನ್ನು ಅನುಭವಿಸಿತು ಮತ್ತು ಈಗ ಚೇತರಿಸಿಕೊಳ್ಳುತ್ತಿದೆ. ಕೋವಿಡ್ ಪ್ರಭಾವದಿಂದಾಗಿ, ಕೆಎಸ್‌ಆರ್‌ಟಿಸಿಗೆ ಯಾವುದೇ ಹೊಸ ಬಸ್‌ಗಳನ್ನು ಖರೀದಿಸಲು ಸಾಧ್ಯವಾಗಲಿಲ್ಲ. ಹೀಗಾಗಿ, ಹಳೆಯ ಬಸ್‌ಗಳನ್ನು ನವೀಕರಿಸುವ ಮತ್ತು ಹೊಚ್ಚ ಹೊಸ ಅವತಾರದಲ್ಲಿ ಸೇವೆಗೆ ತರುವ ಆಲೋಚನೆಯು ಬಂದಿತು. ಸುಮಾರು ಒಂದು ವರ್ಷದಿಂದ, ನಾವು ಸುಮಾರು 500 ಹಳೆಯ ಬಸ್‌ಗಳನ್ನು ನವೀಕರಿಸಿದ್ದೇವೆ ಮತ್ತು ಪ್ರತಿ ವಾರ ಇದರ ಸಂಖ್ಯೆ ಜಾಸ್ತಿಯಾಗುತ್ತಿದೆ' ಎಂದು ಹೇಳಿದರು.

## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

### ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪ್ರಯಾಣಕ್ಕೆ ಸಿಎಂ ಜೊತೆ ಚರ್ಚೆ-ಸಚಿವ ಎಚ್ ಕೆ ಪಾಟೀಲ

# ಅಭಿವ್ಯಕ್ತಿ ಸ್ವಾತಂತ್ರ್ಯದ ವಿಚಾರ ಸಂಕೀರ್ಣ ಆಯೋಜಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಪತ್ರಿಕೋದ್ಯಮ ಮತ್ತು ಸ್ವಾತಂತ್ರ್ಯ, ಪತ್ರಿಕೋದ್ಯಮ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತು ವಿಚಾರ ಸಂಕಿರಣಗಳನ್ನು ಆಯೋಜಿಸುವ ಮೂಲಕ ಯುವ ಪತ್ರಕರ್ತರಿಗೆ ಪತ್ರಿಕೋದ್ಯಮದ ತಿಳಿವಳಿಕೆ ನೀಡಬೇಕು. ಯಾವುದು ಸತ್ಯ, ಯಾವುದು ಅಸತ್ಯ, ಯಾವುದು ಸಮಾಜಕ್ಕೆ ಒಳ್ಳೆಯದು ಎಂಬುದನ್ನು ಗುರುತಿಸಿ ಓದುಗರಿಗೆ ಸುದ್ದಿ ಕೊಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ಹೇಳಿದರು.

ಅವರು, ನಗರದ ಶ್ರೀನಿವಾಸ ಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ವತಿಯಿಂದ ರವಿವಾರ ನಡೆದ ಪತ್ರಿಕಾ ದಿನಾಚರಣೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ 'ಅವ್ವ' ಟ್ರಸ್ಟ್‌ನವರು ಸ್ಥಾಪಿಸಿರುವ ದತ್ತಿ ನಿಧಿ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪ್ರಯಾಣಕ್ಕೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸಿಎಂ ಅವರೊಂದಿಗೆ ಚರ್ಚಿಸಲಾಗುವುದು. ಅದರ ಅನುಷ್ಠಾನಕ್ಕೆ ಇರುವ ತೊಡಕುಗಳನ್ನು ನಿವಾರಿಸಿ, ಮುಂದಿನ ಪತ್ರಿಕಾ ದಿನಾಚರಣೆ ಕಾರ್ಯಕ್ರಮದೊಳಗಾಗಿ ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್ ವ್ಯವಸ್ಥೆ ಒದಗಿಸುವ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಲಿದೆ ಎಂದು ತಿಳಿಸಿದರು.

ಪತ್ರಕರ್ತರಾಗಿ, ವಿಶಾಲ ಕರ್ನಾಟಕ ಪತ್ರಿಕೆ ಸ್ಥಾಪಿಸಿ, ಸಂಪಾದಕರಾಗಿ ಕೆಲಸ ಮಾಡಿರುವ ಕೆ.ಎಚ್. ಪಾಟೀಲ ಅವರ ಹೆಸರಿನಲ್ಲಿ ದತ್ತಿನಿಧಿ ಸ್ಥಾಪಿಸಿ, ಮುಂದಿನ ವರ್ಷದಿಂದ ಎರಡು ಪ್ರಶಸ್ತಿ ವಿತರಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸಚಿವ ಎಚ್.ಕೆ. ಪಾಟೀಲ ಭರವಸೆ ನೀಡಿದರು.



> ಬಸವರಾಜ ಹೊರಟ್ಟಿ ಅವರು ಅವರ ಮಾತೋಶ್ರೀ ಹೆಸರಿನಲ್ಲಿ ಎಲೆಮರೆಯ ಕಾಯಿಯಂತಹ ಸಾಧಕರನ್ನು ಗುರುತಿಸಿ ಅವರಿಗೆ ಸನ್ಮಾನ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಕೆಲಸವನ್ನು ಮಾಡುವುದು ಉತ್ತಮ ಕೆಲಸವಾಗಿದೆ. ಮಕ್ಕಳಿಗೆ ಸನ್ಮಾನ ಮಾಡುವ ಮೂಲಕ ಅವರಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪ್ರೋತ್ಸಾಹ ನೀಡಲು ಈ ಸನ್ಮಾನ ಪೂರಕವಾಗಿದೆ.
> **–ಎಸ್.ವಿ. ಸಂಕನೂರ,** ವಿಧಾನ ಪರಿಷತ್ ಸದಸ್ಯರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಉತ್ತಮವಾಗಿ ಕೆಲಸ ಮಾಡುವವರಿಗೆ ಪ್ರೋತ್ಸಾಹ ನೀಡಿದರೆ ಇನ್ನೂ ಹೆಚ್ಚು ಒಳ್ಳೆಯ ಕೆಲಸವಾಗುತ್ತವೆ ಎಂಬುದಕ್ಕೆ ಗದಗ ಜಿಲ್ಲಾ ಪತ್ರಕರ್ತರ ಸಂಘ ಸಾಕ್ಷಿಯಾಗಿದೆ. ಅವ್ವ ಸೇವಾ ಟ್ರಸ್ಟ್‌ನ ದತ್ತಿನಿಧಿ ಪ್ರಶಸ್ತಿಯನ್ನು ರಶ್ಮಿ ಅವರಿಗೆ ನೀಡಿರುವುದು ಸಾರ್ಥಕವಾಗಿದೆ. ಹೀಗಾಗಿ ನನ್ನ ತಾಯಿ ಆತ್ಮಕ್ಕೆ ಶಾಂತಿ ಸಿಕ್ಕಿದೆ ಎಂದು ಭಾವಿಸಿದ್ದೇನೆ ಎಂದರು.

ಹೆತ್ತ ತಂದೆ-ತಾಯಿ, ಕಲಿತಿರುವ ಸಂಸ್ಥೆಯನ್ನು ಯಾವುದೇ ಕಾರಣಕ್ಕೂ ಮರೆಯಬಾರದು. ಕಳೆದ 13 ವರ್ಷಗಳಿಂದ ಅವ್ವ ಸೇವಾ ಟ್ರಸ್ಟ್ ಮೂಲಕ ರಾಜ್ಯಾದ್ಯಂತ ಹಲವು ರಚನಾತ್ಮಕ ಕಾರ್ಯಗಳನ್ನು ಮಾಡಲಾಗಿದೆ. ಡಿ. 6ರಂದು ಪ್ರತಿವರ್ಷ ತಾಯಿ ನೆನಪಿಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರಲಾಗುತ್ತಿದ್ದು, ಕಾರ್ಯಕ್ರಮಗಳನ್ನು ವೀಕ್ಷಿಸಿದ 9 ಕುಟುಂಬಗಳು ದೂರವಿಟ್ಟಿದ್ದ ತಮ್ಮ ತಂದೆ-ತಾಯಿಯನ್ನು ಪುನಃ ಮನೆಗೆ ಕರೆದುಕೊಂಡು ಅಕ್ಕರೆ ತೆ-ೂರುತ್ತಿದ್ದಾರೆ ಎಂದು ಹೇಳಿದರು.

ಅವ್ವ ಸೇವಾ ಟ್ರಸ್ಟ್‌ನ ಸಂಚಾಲಕ ಡಾ। ಬಸವರಾಜ ಧಾರವಾಡ ಮಾತನಾಡಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ತಮ್ಮ ತಾಯಿ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಅವರ ಸ್ಮರಣಾರ್ಥ ಸ್ಥಾಪಿಸಿರುವ 'ಅವ್ವ ಸೇವಾ ಟ್ರಸ್ಟ್' ಕಳೆದ 13 ವರ್ಷಗಳಿಂದ ವಿವಿಧ ರಚನಾತ್ಮಕ ಕಾರ್ಯಗಳ ಮೂಲಕ ಸಮಾಜ ಸೇವೆಗೆ ಸಮರ್ಪಿಸಿಕೊಂಡಿದೆ. ಅದೇ ಮಾದರಿಯಲ್ಲಿ ಅವ್ವ ಸೇವಾ ಟ್ರಸ್ಟ್ ಮೂಲಕ ಸ್ಥಾಪಿಸಿರುವ ದತ್ತಿನಿಧಿಯಲ್ಲಿ ಪತ್ರಿಕಾ ರಂಗದಲ್ಲಿ ಗಣನೀಯ ಸೇವೆ ಸಲ್ಲಿಸಿದ ರಶ್ಮಿ ಎಸ್. ಅವರಿಗೆ ನೀಡಿರುವ ಮೊದಲ ಪ್ರಶಸ್ತಿ ಉತ್ತಮ ಆಯ್ಕೆಯಾಗಿದೆ' ಎಂದು ತಿಳಿಸಿದರು.

ಅವ್ವ ದತ್ತಿನಿಧಿ ಪ್ರಶಸ್ತಿ ಸ್ವೀಕರಿಸಿದ ಹಿರಿಯ ಪತ್ರಕರ್ತೆ ರಶ್ಮಿ ಎಸ್. ಮಾತನಾಡಿ, ಮಾಧ್ಯಮ ಅಕಾಡೆಮಿ ಮತ್ತು ಸರ್ಕಾರ ಮಾಡದಿರುವ ಕೆಲಸವನ್ನು ಅವ್ವ ಸೇವಾ ಟ್ರಸ್ಟ್ ಇಂದು ಮಹಿಳೆಯರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಪತ್ರಕರ್ತರು ಸಭಾ ಕಾರ್ಯಕ್ರಮಗಳಿಗಿಂತ ಜನರ ಸಮಸ್ಯೆಗಳಿಗೆ ಹೆಚ್ಚು ಧ್ವನಿಯಾಗಬೇಕು. ಜನರ ಸಮಸ್ಯೆಗಳ ಕುರಿತು ಸುದ್ದಿ ಬರೆದಾಗ ಉತ್ತಮ ಸ್ಪಂದನೆ ಸಿಗುತ್ತದೆ. ಅಧಿಕಾರಶಾಹಿ ಹಾಗೂ ಆಡಳಿತವರ್ಗವನ್ನು ಎಚ್ಚರಿಸುವುದರ ಜೊತೆಗೆ ಇವುಗಳಿಗೆ ಕೈಜೋಡಿಸಿದಾಗ ಮಾತ್ರ ಒಳ್ಳೆಯ ಕೆಲಸವಾಗಲು ಸಾಧ್ಯವಿದೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಾಜು ಹೆಬ್ಬಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿ, ಗದಗ ಜಿಲ್ಲಾ ಸಂಘವು 1998ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ರಜತ ಮಹೋತ್ಸವ ಸಂಭ್ರಮದಲ್ಲಿದೆ. ಈ ಸಂದರ್ಭದಲ್ಲಿ ಜಿಲ್ಲೆಯಲ್ಲಿರುವ ಪತ್ರಿಕಾ ಭವನದ ಮೊದಲ ಮಹಡಿಯಲ್ಲಿ ಮಾದರಿ ಸಮುದಾಯ ಭವನ ನಿರ್ಮಾಣಕ್ಕೆ ಸಚಿವ ಎಚ್.ಕೆ.ಪಾಟೀಲ ಸಹಕಾರ ನೀಡಬೇಕು. ಜತೆಗೆ ದಿ. ಕೆ.ಎಚ್. ಪಾಟೀಲ ಅವರ ಹೆಸರಿನಲ್ಲಿ ದತ್ತಿನಿಧಿ ಸ್ಥಾಪಿಸಿದರೆ, ಅವರ ಹೆಸರಿನಲ್ಲಿ ಜಿಲ್ಲಾ ಪತ್ರಕರ್ತರಿಗೆ ಪ್ರಶಸ್ತಿ ನೀಡಲಾಗುವುದು ಎಂದು ಹೇಳಿದರು.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 80ಕ್ಕೂ ಅಧಿಕ ಅಂಕ ಗಳಿಸಿದ ಪತ್ರಕರ್ತರ ಮಕ್ಕಳಾದ ಅನಘಾ ಬಿ. ಕುಲಕರ್ಣಿ, ಪ್ರಣವಸಿಂಗ್ ಜಮಾದಾರ, ಚಕ್ರವರ್ತಿ ಕಾಶೀನಾಥ ಬಿಳಿಮಗ್ಗದ, ಕೀರ್ತಿ ಸಂಗಪ್ಪ ಮೆಣಸಗಿ, ಸ್ವಾತಿ ಎಸ್. ಕುಷ್ಟಗಿ, ಆದರ್ಶ ಸಿ. ಗಣಪ್ಪನವರ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.



> ರಾಜ್ಯದಲ್ಲಿ ಗ್ರಾಮೀಣ ಪತ್ರಕರ್ತರಿಗೆ ಬಸ್‌ಪಾಸ್ ವ್ಯವಸ್ಥೆ ಶೀಘ್ರ ಜಾರಿಗೆ ಬರಬೇಕು. ಈ ಬಗ್ಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಸಚಿವರಾದ ಎಚ್.ಕೆ ಪಾಟೀಲ ಅವರು ಮುಖ್ಯಮಂತ್ರಿಗಳ ಹಾಗೂ ಸರಕಾರದ ಮೇಲೆ ಒತ್ತಡ ತಂದು ಜಾರಿಗೆ ಮುಂದಾಗಬೇಕು ಎಂದರು.
> **– ಜಿ.ಸಿ.ಲೋಕೇಶ್,** ರಾಜ್ಯ ಪ್ರಧಾನ ಕಾರ್ಯದರ್ಶಿ, ಕಾರ್ಯನಿರತ ಪತ್ರಕರ್ತರ ಸಂಘ.

ಸಮಾರಂಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಪುಂಡಲೀಕ ಬಾಳೋಜಿ. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಚ್.ಎಂ. ಶರೀಫನವರ್, ಅಖಿಲ ಕರ್ನಾಟಕ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಕುದರಿಮೋತಿ, ವಾರ್ತಾಧಿಕಾರಿ ವಸಂತ ಮಡ್ಲೂರ, ಪತ್ರಕರ್ತರಾದ ಬಸವರಾಜ್ ದಂಡಿನ, ಅಜಿತ್ ಹೊಂಬಾಳಿ, ಸಂಘದ ಉಪಾಧ್ಯಕ್ಷ ಬನ್ನೇಶ್ ಕುಲಕರ್ಣಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಸಲೀಂ ಬಳಬಟ್ಟಿ, ಗಣೇಶ ಪೈ, ಸಂಜೀವ ಪಾಂಡ್ರೆ, ಮೆಹಬೂಬ ಮೊತೆಖಾನ್, ವಿ.ಡಿ ಕಣವಿ, ಪ್ರಭುಸ್ವಾಮಿ ಅರವಟಗಿಮಠ, ಚಂದ್ರು ಕುಸ್ಲಾಪೂರ, ಶಂಕರ ಗುರಿಕಾರ, ಲಕ್ಷ್ಮಣ ವಗ್ಗಿ, ಫಿರೋಜ್ ಮೋಮಿನ್, ಶರಣು ದೊಡ್ಡೂರು, ಸಂಗಮೇಶ್ ವ್ಯಾಪಾರಿ, ದಿಗಂಬರ ಪೂಜಾರ, ರಾಮಣ್ಣ ವಗ್ಗಿ, ಗೌಸ್ ಬೆಟಗೇರಿ, ನಿಂಗನಗೌಡ ಹಾಗೂ ವಿವಿಧ ತಾಲೂಕಿನ ಘಟಕದ ಅಧ್ಯಕ್ಷರು, ಪದಾಧಿಕಾರಿಗಳು ಸೇರಿದಂತೆ ನೂರಾರು ಜನ ಪತ್ರಕರ್ತರು ಇದ್ದರು. ಆನಂದಯ್ಯ ವಿರಕ್ತಮಠ ನಿರೂಪಿಸಿದರು. ಶಿವಕುಮಾರ ಕುಷ್ಟಗಿ ಸ್ವಾಗತಿಸಿದರು.

## ಮಕ್ಕಳ ಹಕ್ಕುಗಳ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ

▸▸ಮೊದಲನೇ ಪುಟದಿಂದ

ಕಡ್ಡಾಯವಾಗಿ ಶೌಚಾಲಯಗಳು ಇರುವ ಹಾಗೆ ಹಾಗೂ ಅವುಗಳ ಸ್ವಚ್ಛತೆಗೆ ಕ್ರಮ ವಹಿಸಿ ಮಕ್ಕಳ ವಸತಿ ಶಾಲೆಗಳಲ್ಲಿ ಮಕ್ಕಳ ಸಮಸ್ಯೆಗಳನ್ನು ಆಲಿಸಲು ಮಕ್ಕಳ ಸಲಹಾ ಪೆಟ್ಟಿಗೆಗಳನ್ನು ತಪ್ಪದೇ ಅಳವಡಿಸಬೇಕು. ಶಾಲೆಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡದೆ ಕಾನೂನು ಬಾಹಿರ ಚಟುವಟಿಕೆಗಳ ತಡೆಗಾಗಿ ಬೀಟ್ ಪೋಲೀಸರು ಶಾಲೆಗಳಿಗೆ ಭೇಟಿ ನೀಡಬೇಕು ಎಂದು ಸಲಹೆ ಮಾಡಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಮಾತನಾಡಿ, ಶಾಲೆ ಮತ್ತು ಕಾಲೇಜುಗಳಲ್ಲಿ ಮಕ್ಕಳ ಹಕ್ಕುಗಳ ಕುರಿತು ಹಾಗೂ ಪೋಕ್ಸೋ ಕಾಯ್ದೆ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಅಧಿಕಾರಿ ಚಳಗೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪಿ.ವೈ. ಶೆಟ್ಟೆಪ್ಪನವರ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ರವಿ ಗುಂಜೀಕರ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಬಸವಲಿಂಗಪ್ಪ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ. ಜಗದೀಶ ನುಚ್ಚಿನ, ಬಾಲ ನ್ಯಾಯ ಮಂಡಳಿ ಸದಸ್ಯರಾದ ಜೆ.ಸಿ.ರೇಶ್ಮಿ, ಭಾರತಿ ಶಲವಡಿ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾದ ಅನ್ನಪೂರ್ಣ ಗಾಣಿಗೇರ ಹಾಗೂ ಎಲ್ಲ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಕ್ಕಳ ಕಲ್ಯಾಣ ಸಮಿತಿ ಸದಸ್ಯರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

## ಹಸಿವುಮುಕ್ತ, ಸ್ವಾಭಿಮಾನದ ಬದುಕಿಗೆ ಅನ್ನಭಾಗ್ಯ ಆಸರೆ

▸▸ಮೊದಲನೇ ಪುಟದಿಂದ

ಮೂಡಿದೆ ಎಂದರು. ನಮ್ಮನ್ನು ನಂಬಿ ನೀವೆಲ್ಲರೂ ಆಶೀರ್ವದಿಸಿದ್ದಿರಿ ನಿಮ್ಮ ಆಶೀರ್ವಾದದ ಶಕ್ತಿಯಿಂದ ಇಂದು ನಿಮಗೆಲ್ಲ ಹತ್ತು ಕೆ.ಜಿ. ಅಕ್ಕಿ ನೀಡಲು ಸಾಧ್ಯವಾಗಿದೆ ಎಂದರು. ಸಧ್ಯ ಪ್ರತಿ ಪಡಿತರ ಕುಟುಂಬದ ಸದಸ್ಯರಿಗೆ 5 ಕೆ.ಜಿ. ಅಕ್ಕಿ ಹಾಗೂ 5 ಕೆ.ಜಿ.ಗೆ ತಗಲುಬಹುದಾದ ದುಡ್ಡನ್ನು ನೀಡಲಾಗುತ್ತಿದೆ.

ಅನ್ನಭಾಗ್ಯ ಯೋಜನೆಯ ನಗದು ವರ್ಗಾವಣೆಗೆ ಜಿಲ್ಲೆಯಲ್ಲಿ ಸದ್ಯ ಬಿಪಿಎಲ್ ಹಾಗೂ ಎಎಪಿ ಒಟ್ಟಾರೆ ಅರ್ಹ 1,88,833 ಪಡಿತರ ಚೀಟಿದಾರರಿದ್ದು 6,43,423 ಫಲಾನುಭವಿಗಳಿಗೆ 10,36,55,120 ರೂ ನೇರ ನಗದು ಜಮೆ ಮಾಡಲು ಚಾಲನೇ ದೊರಕಿದೆ. ಇದೊಂದು ಕ್ರಾಂತಿಕಾರಕ ಕಾರ್ಯವಾಗಿದ್ದು ಹಸಿವು ಮುಕ್ತ ರಾಜ್ಯ ಮಾಡುವಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ನೇತೃತ್ವದ ನಮ್ಮ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ ಎಂದರು.

ಬೆಲೆ ಏರಿಕೆಯಿಂದ ಬೇಸತ್ತ ಜನಸಾಮಾನ್ಯರಿಗೆ ಆರ್ಥಿಕ ಆಧಾರ ನೀಡುವ ಗೃಹ ಲಕ್ಷ್ಮೀ ಯೋಜನೆಗೆ ನೋಂದಣಿ ಕಾರ್ಯಕ್ಕೆ ಜುಲೈ 19 ರಂದು ಚಾಲನೆ ನೀಡಲಾಗುತ್ತಿದೆ. ಪ್ರತಿ ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು 2000 ರೂ. ನೆರವು ನೀಡುವ ಯೋಜನೆ ಇದಾಗಿದೆ. ಬಡವರ ಬದುಕು ಅಸಹನೀಯವಾಗಿರುವದನ್ನು ಮನಗಂಡು ಕುಟುಂಬದ ಆರ್ಥಿಕ ಪುನಶ್ಚೇತನಕ್ಕೆ ಸರಕಾರ ಮುಂದಾಗಿದೆ. ಅಗಸ್ಟ 16, 17 ರಂದು ಗೃಹ ಲಕ್ಷ್ಮೀ ಯೋಜನೆಯ 2000 ರೂ. ಆರ್ಥಿಕ ನೆರವು ಅರ್ಹರಿಗೆ ತಲುಪಲಿದೆ. ಈ ಮೊತ್ತದಿಂದ ಆರ್ಥಿಕ ಅಡಚಣೆ ನಿಗಿಸಲು ನೆರವು ನೀಡಿದಂತಾಗುತ್ತದೆ. ಈಗಾಗಲೇ ಶಕ್ತಿ ಯೋಜನೆ ಅಪಾರ ಜನಮನ್ನಣೆಗೆ ಪಾತ್ರವಾಗಿದ್ದು ಒಂದೇ ತಿಂಗಳಲ್ಲಿ 17 ಕೋಟಿ ಮೊತ್ತದ ಪ್ರಯಾಣವನ್ನು ಮಹಿಳೆಯರು ಮಾಡಿದ್ದು ಖುಷಿ ತಂದಿದೆ ಎಂದರು.

ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಿದ್ದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಬಡವರ ಹಸಿವು ನಿಗಿಸುವ ಶ್ರೇಷ್ಠ ಯೋಜನೆ ಅನ್ನಭಾಗ್ಯ ರಾಜ್ಯದಲ್ಲಿ 1.36 ಕೋಟಿ ಬಿ.ಪಿ.ಎಲ್ ಪಡಿತರ ಕುಟುಂಬಗಳಿವೆ. ಸರ್ಕಾರದ ಪ್ರತಿ ಪೈಸೆ. ಅರ್ಹರಿಗೆ ತಲುಪಬೇಕು ಮತ್ತು ಅದು ಸದುಪಯೋಗ ಆಗಬೇಕು.

ಸರ್ಕಾರ ಅಥವಾ ಅಧಿಕಾರಿ ಉತ್ತಮ ಕೆಲಸ ಮಾಡಿದಾಗ ಅದನ್ನು ಮೆಚ್ಚಿ ಬೆನ್ನು ತಟ್ಟುವ ಕಾರ್ಯವಾಗಬೇಕು ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಜಿ.ಎಸ್.ಪಾಟೀಲ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಸುಶೀಲಾ ಬಿ, ಜಿಲ್ಲಾ ಪೋಲಿಸ್ ಅಧೀಕ್ಷಕರ ಬಿ.ಎಸ್.ನೇಮಗೌಡ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಎಲ್.ಡಿ.ಚಂದಾವರಿ ಹಾಜರಿದ್ದರು. ಆಹಾರ ಇಲಾಖೆ ಉಪನಿರ್ದೇಶಕ ಗಂಗಪ್ಪ ಎಂ. ಸ್ವಾಗತಿಸಿದರು. ಜಿಲ್ಲಾ ಖಜಾನೆ ಉಪನಿರ್ದೇಕ ಹರಿನಾಥಬಾಬು ವಿ ವಂದಿಸಿದರು. ಬಾಹುಬಲಿ ಜೈನರ ಕಾರ್ಯಕ್ರಮ ನಿರೂಪಿಸಿದರು.

## ಶ್ರೀ ಶಾಂಭವಿ ಸೇವಾ ಸಮಿತಿಯ ನೂತನ ಪದಾಧಿಕಾರಿಗಳ ನೇಮಕ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ಬಳಗಾನೂರು ಗ್ರಾಮದಲ್ಲಿ ಶ್ರೀ ಶಾಂಭವಿ ಸೇವಾ ಸಮಿತಿ(ರಿ) ಬಳಗಾನೂರು ಸಮಿತಿಯನ್ನು ಸರ್ಕಾರದ ನೋಂದಣಿ ಇಲಾಖೆಯ ನಿಯಮಾನುಸಾರ ಸ್ಥಾಪಿಸಲಾಗಿದ್ದು, ನೂತನವಾಗಿ ಸಮಿತಿಯ ಪದಾಧಿಕಾರಿಗಳ ನೇಮಕ ಮಾಡಲಾಗಿದೆ.



ಅಧ್ಯಕ್ಷರಾಗಿ ಡಾ.ಹನುಮಂತಗೌಡ ಆರ್ ಕಲ್ಮನಿ, ಕಾರ್ಯದರ್ಶಿಯಾಗಿ ಶರಣಪ್ಪ ಸೋಮಲಿಂಗಪ್ಪ ಭಿಂಗಿ, ಗೌರವಾಧ್ಯಕ್ಷರಾಗಿ ಗಂಗನಗೌಡ ಬಸನಗೌಡ ಚನ್ನಪ್ಪಗೌಡ್ರ, ಉಪಾಧ್ಯಕ್ಷರಾಗಿ ಸುರೇಶ ಭಿಮಪ್ಪ ಚಿಮ್ಮನಕಟ್ಟಿ, ಸಹ ಕಾರ್ಯದರ್ಶಿಯಾಗಿ ಶಂಕ್ರಪ್ಪ ಗೂಳಪ್ಪ ಹಡಪದ, ಖಜಾಂಚಿಯಾಗಿ ಶರಣಪ್ಪ ಮಲಕಾಜಪ್ಪ ಕರಡ್ಡಿ, ನಿರ್ದೇಶಕರಾಗಿ ಗಫಾರಸಾಬ ನದಾಫ್, ಸಂಗಪ್ಪ ಚವಡಿ, ಉಮೇಶ ಮಡಿವಾಳರ, ನಾಗಪ್ಪ ಬಡಿಗೇರ, ಸಿದ್ಧಪ್ಪ ವಗ್ಗನವರ, ವೆಂಕಟೇಶ ಹಡಪದ, ಬಸವರಾಜ ಚವಡಿ, ದಾನಪ್ಪ ಗಡ್ಡಪ್ಪನವರ, ವೆಂಕಪ್ಪ ವಾರದ ಇವರನ್ನು ನೇಮಕ ಮಾಡಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಡಾ.ಹನುಮಂತಗೌಡ ಕಲ್ಮನಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಐಐಟಿ ಕಾಲೇಜಿಗೆ ಆಯ್ಕೆಯಾದ ಅಪೇಕ್ಷಾ ಪಾಟೀಲ್: ಸನ್ಮಾನ

■ವಿಜಯಸಾಕ್ಷಿ ಸುದ್ದಿ, ಗದಗ

ವಿಜಯಸಾಕ್ಷಿ ಸುದ್ದಿ, ಸ್ಥಳೀಯ ಸ್ಟೂಡೆಂಟ್ ಎಜ್ಯುಕೇಶನ್ ಸೊಸೈಟಿಯ ಸನ್ಮಾರ್ಗ ಪದವಿಪೂರ್ವ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿನಿ ಅಪೇಕ್ಷಾ ಸಿ ಪಾಟೀಲ್ ಬಿಎಸ್ಸಿ ನಂತರ ಜೆಎಎಂ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಎಂ.ಎಸ್ಸಿ ವ್ಯಾಸಂಗ ಮಾಡಲು ಜಾರ್ಖಂಡ್ ರಾಜ್ಯದ ಧನಬಾದ ಜಿಲ್ಲೆಯ ಐಐಟಿ ಕಾಲೇಜಿಗೆ ಆಯ್ಕೆಯಾಗಿದ್ದಾರೆ. ತನ್ನಿಮಿತ್ತ, ಸನ್ಮಾರ್ಗ ಕಾಲೇಜಿನ ವತಿಯಿಂದ ಅಪೇಕ್ಷಾರನ್ನು ಸನ್ಮಾನಿಸಲಾಯಿತು.



ಈ ಸಂದರ್ಭದಲ್ಲಿ ಸಂಸ್ಥೆಯ ಚೇರಮನ್ ಪ್ರೊ. ರಾಜೇಶ ಕುಲಕರ್ಣಿ ಮಾತನಾಡಿ, ಕೇವಲ ಇಂಜಿನಿಯರಿಂಗ್, ಮೆಡಿಕಲ್ ಕ್ಷೇತ್ರಕ್ಕೆ ತೆರಳುವುದರ ಜೊತೆಗೆ 'ಜಾಮ್ಸ್'ನಂತಹ ಪರೀಕ್ಷೆಗಳನ್ನು ಬರೆದು ಸಂಶೋಧನಾ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಮನೋಭಾವನೆ ಮೈಗೂಡಿಸಿಕೊಂಡರೆ ವಿಜ್ಞಾನಿಯಾಗಿ ಹೊರಹೊಮ್ಮಬಹುದೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ನಿರ್ದೇಶಕ ಪ್ರೊ. ಉಡುಪಿ ದೇಶಪಾಂಡೆ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಾಧಿಸುವ ಛಲ ಮೂಡಿದರೆ ಯಾವ ಕ್ಷೇತ್ರದಲ್ಲಾದರೂ ಸಾಧಿಸಿ ತೋರಿಸಬಹುದು. ನೀವೆಲ್ಲರೂ ಅಪೇಕ್ಷಾ ಪಾಟೀಲರ ಮಾರ್ಗದರ್ಶನ ಪಡೆದು, ಸಾಧನೆಗೆ ಬೇಕಾದ ಅಧ್ಯಯನದ ಸೂಕ್ಷ್ಮ ಸಂಗತಿಗಳನ್ನು ತಿಳಿದುಕೊಂಡು ಸಾಧನೆಯೆಡೆಗೆ ಸಾಗಬೇಕೆಂದರು.

ಪ್ರಾಚಾರ್ಯ ಪ್ರೊ. ಪ್ರೇಮಾನಂದ ರೋಣದ ಸಾಂದರ್ಭಿಕವಾಗಿ ಮಾತನಾಡಿದರು. ಸನ್ಮಾನ ಸ್ವೀಕರಿಸಿದ ಅಪೇಕ್ಷಾ ಪಾಟೀಲ ವಿದ್ಯಾರ್ಥಿಗಳಿಗೆ ಸಲಹೆ ಸೂಚನೆಗಳನ್ನು ನೀಡಿ, ಸಾಧನೆಯ ಪರಿಶ್ರಮವನ್ನು ತಿಳಿಸಿದರು. ಸಮಾರಂಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಪ್ರೊ. ರೋಹಿತ್ ಒಡೆಯರ್, ಪ್ರೊ. ಸಯ್ಯದ ಮತೀನ್ ಮುಲ್ಲಾ, ಪ್ರೊ. ರಾಹುಲ್ ಒಡೆಯರ್, ಆಡಳಿತಾಧಿಕಾರಿ ಎಂ ಸಿ ಹಿರೇಮಠ, ಉಪನ್ಯಾಸಕ ಬಳಗದವರು ಉಪಸ್ಥಿತರಿದ್ದರು. ಪ್ರೊ. ಸಂತೋಷ ನಾಗರಾಳ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಪ್ರೊ. ವಿಜಯ ಹೆಬಸೂರ ವಂದಿಸಿದರು.

## ನಾಯಿ ಕೆಮ್ಮು ರೋಗ ತಡೆಗಟ್ಟಲು ಚುಚ್ಚುಮದ್ದು



■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಇಲ್ಲಿಯ ಬಾಪೂಜಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ನಾಯಿ ಕೆಮ್ಮು ಹಾಗೂ ನಂಜು ರೋಗ ತಡೆಗಟ್ಟುವ ಚುಚ್ಚುಮದ್ದನ್ನು ಹಾಕಲಾಯಿತು.

ಇಲ್ಲಿನ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈಧ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗವು ಶಾಲೆಯ 1 ಮತ್ತು 4 ನೇ ತರಗತಿಯ ಮಕ್ಕಳಿಗೆ ಡಿಫ್ತೀರಿಯಾ( ನಾಯಿಕೆಮ್ಮು) ರೋಗಕ್ಕೆ ಡಿ.ಪಿ.ಟಿ ಚುಚ್ಚುಮದ್ದು ಹಾಕಿ ಮಾತ್ರೆಯನ್ನು ಹಾಕಲಾಯಿತು. ಇನ್ನೂ 4 ನೇ ತರಗತಿಯ ಮಕ್ಕಳಿಗೆ ನಂಜು ರೋಗದ ವಿರುದ್ಧ ಹೋರಾಡುವ ಟಿ.ಡಿ. ಚುಚ್ಚುಮದ್ದು ಹಾಕಿ ಮಾತ್ರೆಗಳನ್ನು ನೀಡಲಾಯಿತು. ಜ್ವರ ಕಾಣಿಸಿಕೊಂಡಿರುವ 5ನೇ ತರಗತಿ ಮಕ್ಕಳಿಗೆ ರಕ್ತ ಪರೀಕ್ಷೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಶಾಲೆಯ ಮುಖ್ಯೋಪಾಧ್ಯಯರಾದ ಆರ್.ಬಿ ಬರದ್ವಾಡ, ಸರಕಾರದ ಈ ಉಚಿತ ಸೇವೆಯು ಮಕ್ಕಳು ಆರೋಗ್ಯದಿಂದ ಇರಲು ಸಹಾಯವಾಗುತ್ತದೆ. ಪಾಲಕರು ತಮ್ಮ ಮಕ್ಕಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ಇಂತಹ ಲಸಿಕೆಯನ್ನು ಹಾಕಿಸಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದರು. ಕಿರಿಯ ಆರೋಗ್ಯ ಸಹಾಯಕಿ ಎಚ್.ಡಿ.ಮಾದರ, ಶಿಕ್ಷಕ ಬಿ.ಐ . ಗರ್ಜಪ್ಪನವರ, ಆಶಾ ಕಾರ್ಯಕರ್ತರು ಈ ಶಿಬಿರದಲ್ಲಿ ಇದ್ದರು.

## ಸಂಘಟನಾ ಶಕ್ತಿಯಿಂದ ಸಮಾಜಮುಖಿ ಸೇವೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಂಘಟನಾ ಶಕ್ತಿಯಿಂದ ಸಮಾಜಮುಖಿ ಸೇವೆ ಮಾಡಬೇಕೆಂಬ ಧ್ಯೇಯಕ್ಕೆ ಬದ್ಧರಾಗಿ ಶಕ್ತಿ ಮೀರಿ ಶ್ರಮಿಸೋಣ ಎಂದು ಇನ್ನರವ್ಹೀಲ್ ಕ್ಲಬ್‌ನ ಲಕ್ಷ್ಮೇಶ್ವರ ತಾಲೂಕು ಘಟಕದ ಸಂಸ್ಥಾಪಕ ಅಧ್ಯಕ್ಷೆ ಮಾಲಾದೇವಿ ದಂಧರಗಿ ಹೇಳಿದರು.



ಅವರು ಭಾನುವಾರ ಪಟ್ಟಣದ ಶ್ರೀ ತಾಯಿ ಪಾರ್ವತಿ ಮಕ್ಕಳ ಬಳಗದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಇನ್ನರ್ ವ್ಹೀಲ್ ಕ್ಲಬ್‌ನ್ ಲಕ್ಷ್ಮೇಶ್ವರ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ, ಹಿರಿಯ ಜೀವಿಗಳಿಗೆ ಸನ್ಮಾನ ಮತ್ತು ಬಡ ಮಕ್ಕಳಿಗೆ ನೋಟ್‌ಬುಕ್-ಪೆನ್ ವಿತರಣೆ ಸಮಾರಂಭದಲ್ಲಿ ಮಾತನಾಡಿ, ನಮ್ಮ ಸಂಸ್ಥೆಯಿಂದ ಕಳೆದ ಹಲವಾರು ವರ್ಷಗಳಿಂದ ಪರಿಸರ ಸಂರಕ್ಷಣೆ, ಬಡ ಮಕ್ಕಳ ಶಿಕ್ಷಣ, ಆರೋಗ್ಯ ಸೇವೆ, ಹಿರಿಯರ ಸೇವೆ, ಮಹಿಳಾ ಸಬಲೀಕರಣ ದಂತಹ ಅನೇಕ ಕಾರ್ಯಕ್ರಮ ಹಾಗೂ ಕೋವಿಡ್ ಸಂದರ್ಭದಲ್ಲಿ ಸಹಾಯಹಸ್ತ ಚಾಚುವ ಕಾರ್ಯವನ್ನು ಎಲ್ಲರ ಸಹಕಾರದಿಂದ ಮಾಡಲು ಸಾಧ್ಯವಾಗಿದೆ. ಸಂಸ್ಥೆಯಿಂದ ಮುಂದೆಯೂ ಇನ್ನಷ್ಟು ಉತ್ತಮ ಸಮಾಜಮುಖಿ ಸೇವೆಗಳು ನಡೆಯಲಿ ಎಂದರು.

ಈ ವೇಳೆ ಸುವರ್ಣಬಾಯಿ ಬಹದ್ದೂರ್ ದೇಸಾಯಿ, ರೋಹಿಣಿಬಾಯಿ ಬಹದ್ದೂರ್ ದೇಸಾಯಿ ಅವರನ್ನು ಸನ್ಮಾನಿಸಲಾಯಿತು. ಬಡ ಮಕ್ಕಳಿಗೆ ನೋಟ್-ಬುಕ್ ಪೆನ್ ವಿತರಿಸಲಾಯಿತು. 2023-24 ನೇ ಸಾಲಿನ ನೂತನ ಅಧ್ಯಕ್ಷರಾಗಿ ಕಾವ್ಯ ಬಹದ್ದೂರ ದೇಸಾಯಿ, ಕಾರ್ಯದರ್ಶಿಯಾಗಿ ಉಮಾ ಬಿಂಕದಕಟ್ಟಿ, ಖಜಾಂಚಿಯಾಗಿ ರೇಖಾ ವಡಕಣ್ಣವರ, ಐಎಸ್‌ಓ ಆಗಿ ಅಶ್ವಿನಿ ಅಂಕಲಕೋಟಿ ಅಧಿಕಾರ ಸ್ವೀಕರಿಸಿದರು. ಡಾ ಸುಜಾತ ಸಂಗೂರ, ಮಂಜುಳಾ ಸತ್ಯಪ್ಪನವರ, ಕಾವ್ಯ ಪೈ, ಮಂಜುಳಾ ಅಕ್ಕಿ, ರೂಪ ನವಲೆ ನೂತನ ಸದಸ್ಯತ್ವ ಪಡೆದರು. ಸುಲೋಚನಾ ಜವಾಯಿ, ನಿರ್ಮಲ ಅರಳಿ, ರತ್ನ ಕರ್ಕಿ, ನಂದ ಧರ್ಮಾಯತ, ಜಯಶ್ರೀ ಮೆಳ್ಳಿಗೇರಿ, ಇಂದುಮತಿ ಜಕ್ಕನಗೌಡ್ರ ಪಾಲ್ಗೊಂಡಿದ್ದರು. ರೇಖಾ ವಡಕಣ್ಣವರ, ಉಮಾ ಬಿಂಕದಕಟ್ಟಿ, ಪ್ರಿಯಾ ಕುಂಬಿ, ಮಂಜುಳಾ ಓದುನವರ ನಿರ್ವಹಿಸಿದರು.

## ಶ್ರೀಗಳ ಭದ್ರತೆಗಾಗಿ ಅಂಗರಕ್ಷಕರನ್ನು ನೇಮಿಸಿ

▸▸ಮೊದಲನೇ ಪುಟದಿಂದ

ಆಗಿದ್ದು, ಅತ್ಯಂತ ಪ್ರಭಾವಶಾಲಿ ಜಗದ್ಗುರುಗಳಾಗಿದ್ದಾರೆ. ಏನೇ ಅನ್ಯಾಯ-ಅಕ್ರಮ ನಡೆದರೂ ಎಂತಹುದೇ ಶಕ್ತಿಯನ್ನು ಎದುರಿಸಿ ನಿಲ್ಲುವ ಸತ್ಯನಿಷ್ಠೆಯ ದಿಟ್ಟ ಶ್ರೀಗಳು ನಮ್ಮ ಸಮಾಜದ ಆಸ್ತಿಯಾಗಿದ್ದಾರೆ. ಅವರು ಶಿರಹಟ್ಟಿ ಮಠದ ಉತ್ತರಾಧಿಕಾರಿಗಳಾದ ನಂತರ ಮತ್ತು ಮೊದಲೂ ಅವರ ಮೇಲೆ ಸಂಚು ರೂಪಿಸುವ, ಅವರ ಸ್ಥೈರ್ಯ-ಧೈರ್ಯ ಕುಗ್ಗಿಸುವ ಕೆಲಸ ನಡೆಯುತ್ತಾ ಬಂದಿದೆ. ಜು.12ರ ರಾತ್ರಿ ಮೂವರು ಅಪರಿಚಿತ, ಹಿಂದಿ ಮಾತನಾಡುವ ವ್ಯಕ್ತಿಗಳು ಶಿರಹಟ್ಟಿ ಮಠದ ಕಾಂಪೌಂಡ್ ಹಾರಿ, ಶ್ರೀಗಳ ಕೊಠಡಿಯತ್ತ ಧಾವಿಸಿದ್ದಾರೆ. ಭಕ್ತರು ನೋಡಿ ಕೂಗುತ್ತಿದ್ದಂತೆಯೇ ಪರಾರಿಯಾಗಿದ್ದಾರೆ. ಅವರ ಮೇಲಿರುವ ದೇವರ-ಗುರುಗಳ ಆಶೀರ್ವಾದ, ಅವರಲ್ಲಿನ ಆತ್ಮಸ್ಥೈರ್ಯ, ಕೋಟ್ಯಾಂತರ ಭಕ್ತರ ಪ್ರಾರ್ಥನೆ ಶ್ರೀಗಳಿಗೆ ಶ್ರೀರಕ್ಷೆಯಾಗಿದೆ.

ಈಗಾಗಲೇ ಅವರ ರಕ್ಷಣೆಗಾಗಿ ಭಕ್ತರು ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದಾರೆ. ಆದ್ದರಿಂದ, ರಾಜ್ಯದ ಮುಖ್ಯಮಂತ್ರಿಗಳು, ಗೃಹಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು, ಪೊಲೀಸ್ ಇಲಾಖೆ, ಜಿಲ್ಲಾಡಳಿತ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಶ್ರೀಗಳ ಭದ್ರತೆಗಾಗಿ ಅಂಗರಕ್ಷಕರನ್ನು ನೇಮಿಸಬೇಕು. ಇಷ್ಟಾಗಿಯೂ ಶ್ರೀಗಳಿಗೇನಾದರೂ ತೊಂದರೆಯಾದಲ್ಲಿ ಭಕ್ತ ಸಮೂಹ ಸರ್ಕಾರದ ವಿರುದ್ಧ ಧಂಗೆ ಏಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ವೇಳೆ ಭಕ್ತರಾದ ಮಾರ್ತಂಡಪ್ಪ ಪೆದ್ದರ, ಮುತ್ತಣ್ಣ ಗುಳೇದ, ಹನಮಂತಪ್ಪ ಕೋಣನತಂಬಗಿ, ಶಂಬಣ್ಣ ಯಳವತ್ತಿ, ಸಿದ್ದಣ್ಣ ಮರಳಿಹಳ್ಳಿ, ಜುಂಜಪ್ಪ ಮುದಿಯಮ್ಮನವರ, ಜಗದೀಶ ಹುಲ್ಲಮ್ಮನವರ, ಫಕ್ಕಿರೇಶ ನಾವಿ, ಹನಮಂತಪ್ಪ ದೊಡ್ಡಮನಿ, ರಾಜು ಬಾಲೆಹೊಸೂರ ಮುಂತಾದವರಿದ್ದರು.

## ಜು.20ರಂದು ಕ್ಯಾಂಪಸ್ ನೇಮಕಾತಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಟಿಎಂಇಎಸ್ ಸಂಸ್ಥೆಯ ಬಾಪೂಜಿ ಐಟಿಐ ಕಾಲೇಜ್ ಲಕ್ಷ್ಮೇಶ್ವರ ಹಾಗೂ ಎಸ್‌ಆರ್‌ಡಿ ಹೆಚ್‌ಆರ್ ಸರ್ವಿಸ್ ಪ್ರೈ.ಲಿ ನಿಂದ ಜುಲೈ 20ರಂದು ಗುರುವಾರ ಲಕ್ಷೇಶ್ವರದ ಬಾಪೂಜಿ ಐಟಿಐ ಕಾಲೇಜಿನಲ್ಲಿ ಕ್ಯಾಂಪಸ್ ನೇಮಕಾತಿ ಪ್ರಕ್ರಿಯೆ ಆಯೋಜಿಸಲಾಗಿದೆ.

ಟಿವಿಎಸ್, ಹೊಂಡಾ, ಫ್ಲಿಪ್ಕಾರ್ಟ್, ಫುಡ್ ಕ್ರಿಯೇಷನ್ಸ್ ಪ್ರೈ.ಲಿ ಹಾಗೂ ಮನುಲಿ ಹೈಡ್ರಾಲಿಕ್ಸ್ ಕನೆಕ್ಟರ್ಸ್ ಇಂಡಿಯಾ ಪ್ರೈ.ಲಿನಿಂದ ಸುಮಾರು 300 ಯುವಕರಿಗೆ ಉದ್ಯೋಗಾವಕಾಶ ನೀಡಲಾಗುವುದು. ಯಾವುದೇ ಐಟಿಐ, ಪದವಿ ಹೊಂದಿರುವ ಯುವಕರು ಈ ಕ್ಯಾಂಪಸ್ ನೇಮಕಾತಿಯ ಸದುಪಯೋಗ ಪಡೆದುಕೊಳ್ಳಬೇಕು. ಮಾಹಿತಿಗಾಗಿ ಶ್ರೀಕಾಂತ್ ಎಂಎಚ್ 9620907398 ಮತ್ತು ಆನಂದ ರಮೇಶ್ 6363845001 ಇವರನ್ನು ಸಂಪರ್ಕಿಸಬೇಕೆಂದು ಪ್ರಾಚಾರ್ಯ ಕೆ. ನಾಗರಾಜಪ್ಪ ತಿಳಿಸಿದ್ದಾರೆ.

## ಉಯ್ಯಾಲೆಯಲ್ಲಿ ಆಡುತ್ತಿದ್ದ ಬಾಲಕನ ಕುತ್ತಿಗೆಗೆ ಹಗ್ಗ ಸಿಲುಕಿ ಸಾವು

■ವಿಜಯಸಾಕ್ಷಿ ಸುದ್ದಿ, ಮಂಗಳೂರು

ತನ್ನ ಮನೆಯ ಬಳಿ ಉಯ್ಯಾಲೆಯಲ್ಲಿ ಆಟ ವಾಡುತ್ತಿದ್ದಾಗ ಆಕಸ್ಮಿಕವಾಗಿ ಉಯ್ಯಾಲೆಯ ಹಗ್ಗ ಕುತ್ತಿಗೆಗೆ ಸಿಲುಕಿ 14 ವರ್ಷದ ಬಾಲಕ ಸಾವಿಗೀಡಾಗಿರುವ ದಾರುಣ ಘಟನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮೃತನನ್ನು ಎಂಟನೇ ತರಗತಿಯ ವಿದ್ಯಾರ್ಥಿ ಶ್ರೀಶಾ ಎಂದು ಗುರುತಿಸಲಾಗಿದೆ.

ಬೆಳ್ತಂಗಡಿ ತಾಲೂಕಿನ ಮಲವಂತಿಗೆ ಗ್ರಾಮದ ಮನೆಯ ಬಳಿ ಆಟವಾಡುತ್ತಿದ್ದಾಗ ಉಯ್ಯಾಲೆಯ ಹಗ್ಗ ಕೊರಳಿಗೆ ಸಿಕ್ಕಿಹಾಕಿಕೊಂಡಿದೆ. ಈ ವೇಳೆ ಆತ ಕೆಳಗೆ ಬಿದ್ದಿದ್ದಾನೆ. ಇದನ್ನು ಆತನ ತಂಗಿ ಗಮನಿಸಿ ಪೋಷಕರಿಗೆ ವಿಷಯ ತಿಳಿಸಿದ್ದಾಳೆ.

ಬಾಲಕನನ್ನು ಕೂಡಲೇ ಉಜಿರೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಆ ವೇಳೆಗಾಗಲೇ ಆತ ಮಾರ್ಗಮಧ್ಯೆಯೇ ಮೃತ ಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಳ್ತಂಗಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನೀರಲಗಿ ಶಿಕ್ಷಕ ದಂಪತಿಗಳ ಸನ್ಮಾನ ಸಮಾರಂಭದಲ್ಲಿ ಐ ಬಿ ಬೆನಕೊಪ್ಪ ಅಭಿಮತ

# ವಿದ್ಯಾರ್ಥಿಗಳ ಕುರಿತಾದ ಕಾಳಜಿ ಸ್ಮರಣೀಯ



■ ವಿಜಯಸಾಕ್ಷಿ ಸುದ್ದಿ, ಗದಗ

ಕಳೆದ ಮೂರು ದಶಕಗಳಿಂದ ಶಿಕ್ಷಕ ವೃತ್ತಿಯಲ್ಲಿರುವ ಇಮಾಮ್‌ಸಾಬ್ ನೀರಲಗಿ ದಂಪತಿಗಳ ಸೇವೆ ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಸಾರ್ಥಕತೆ ಕಂಡಿದೆ ಎಂದು ನಿವೃತ್ತ ಡಿಡಿಪಿಐ ಐ ಬಿ ಬೆನಕೊಪ್ಪ ಅಭಿಪ್ರಾಯಪಟ್ಟರು.

ಅವರು ಲಕ್ಷ್ಮೇಶ್ವರದಲ್ಲಿ ಸಮಾನ ಮನಸ್ಕ ಗೆಳೆಯರ ಬಳಗವು ಶಿಕ್ಷಕ ದಂಪತಿಗಳಿಗೆ ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ನೀರಲಗಿ ದಂಪತಿಗಳನ್ನು ಸನ್ಮಾನಿಸಿ ಮಾತನಾಡಿ, ಕಳೆದ ಮೂರು ದಶಕಗಳಿಂದ ನೀರಲಗಿ ದಂಪತಿಗಳು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಾ ಬಂದಿದ್ದಾರೆ. ವಿದ್ಯಾರ್ಥಿಗಳಿಗಾಗಿ ವಿಶೇಷ ಕಾಳಜಿವಹಿಸಿ ಅವರನ್ನು ತಿದ್ದಿ ತೀಡುವಲ್ಲಿ, ಅವರ ಬೆಳವಣಿಗೆಯಲ್ಲಿ ಸಾಕಷ್ಟು ಕೊಡುಗೆ ನೀಡಿದ್ದಾರೆ. ಶಿಕ್ಷಣ ಇಲಾಖೆ ಇವರ ಸೇವೆಯನ್ನು ಸಾಕಷ್ಟು ಬಾರಿ ಗುರುತಿಸಿ ಗೌರವಿಸಿದೆ. ಹಲವಾರು ಸಂಘ-ಸಂಸ್ಥೆಗಳು, ಹಿತೈಷಿಗಳು ಇವರ ಸಾರ್ಥಕ ಸೇವೆಯನ್ನು ಗುರುತಿಸಿ ಅಭಿನಂದಿಸಿವೆ. ಮುಂದಿನ ತಮ್ಮ ಸೇವಾವಧಿಯಲ್ಲಿ ಇನ್ನಷ್ಟು ಸಮಾಜಮುಖಿ ಕೆಲಸಗಳನ್ನು ಮಾಡಲಿ ಎಂದು ಹಾರೈಸಿದರು.

ಇನ್ನೋರ್ವ ಮುಖ್ಯ ಅತಿಥಿ ಡಾ. ಬಸವರಾಜ್ ಧಾರವಾಡ ಮಾತನಾಡಿ, ನೀರಲಗಿ ಶಿಕ್ಷಕ ದಂಪತಿಗಳು ಸದಾ ವಿದ್ಯಾರ್ಥಿಗಳ ಹಿತ ಬಯಸುವ ಮೂಲಕ ವಿದ್ಯಾರ್ಥಿಗಳ ಜ್ಞಾನಾರ್ಜನೆಗಾಗಿ ಶ್ರಮಿಸುತ್ತಾ ಬಂದಿದ್ದಾರೆ. ಹೀಗಾಗಿ ಅವರ ಸೇವೆಯನ್ನು ಗುರುತಿಸಿ, ಸಮಾಜದ ಸರ್ವ ಸಮುದಾಯ ಅವರನ್ನು ಗೌರವಿಸಿದೆ. ಅವರ ಉಳಿದ ಸೇವಾ ಅವಧಿ ಕೂಡ ಸಮಾಜಮುಖಿಯಾಗಿರಲಿ ಎಂದು ಹಾರೈಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಇಮಾಮಸಾಬ್ ನೀರಲಗಿ ಗುರುಗಳು, ನನ್ನ ಹಾಗೂ ನನ್ನ ಧರ್ಮಪತ್ನಿಯ ಶಿಕ್ಷಕ ವೃತ್ತಿಯ ಸೇವೆಯನ್ನು ಶಿಕ್ಷಣ ಇಲಾಖೆ ಹಾಗೂ ಹಿತೈಷಿಗಳು ಗುರುತಿಸಿ ಗೌರವಿಸಿದ್ದಕ್ಕೆ ನಾನು ಅವರಿಗೆ ಚಿರಋಣಿಯಾಗಿರುವೆ. ಮುಂದೆಯೂ ಅವರ ಮಾರ್ಗದರ್ಶನ, ಸಲಹೆ-ಸೂಚನೆಗಳು, ಆಶೀರ್ವಾದ ಸದಾ ಇರಲಿ ಎಂದು ಕೋರಿದರು.

ಈ ಸಂದರ್ಭದಲ್ಲಿ ನಿವೃತ್ತ ಮುಖ್ಯೋಪಾಧ್ಯಾಯ ಶಿವಯೋಗಿ ಅಗಡಿ, ಮುಖ್ಯೋಪಾಧ್ಯಾಯರಾದ ಎಂ ಎಚ್ ಪೂಜಾರ್, ಎನ್ ಎ ಮುಲ್ಲಾ, ಆರ್ ಎ ಶಬ್ಬೀರ್ ಮುಂತಾದವರು ಉಪಸ್ಥಿತರಿದ್ದರು.

# ಏಕ ವಲಯ ಖೋ ಖೋ ಪಂದ್ಯಾವಳಿ ನಾಳೆ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಕರ್ನಾಟಕ ವಿಶ್ವ ವಿದ್ಯಾಲಯದ ಏಕವಲಯ ಮಟ್ಟದ ಖೋ ಖೋ ಪಂದ್ಯಾವಳಿ ಇಲ್ಲಿನ ಶ್ರೀ ಅನ್ನದಾನೇಶ್ವರ ಮಹಾವಿದ್ಯಾಲಯದ ಮೈದಾನದಲ್ಲಿ ಜುಲೈ 19ರಂದು ಬೆಳಿಗ್ಗೆ 9.30ಕ್ಕೆ ಉದ್ಘಾಟನೆಗೊಳ್ಳಲಿದೆ ಎಂದು ಕಾಲೇಜಿನ ಪ್ರಾಚಾರ್ಯ ಎಸ್ ಜಿ ಕೇಶಣ್ಣವರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಮಲ್ಲಕಂಬ ಕ್ರೀಡಾಪಟು ಮತ್ತು ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಪುರಸ್ಕೃತ ಭೀಮಪ್ಪ ಹಡಪದ ಅವರು ಈ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದಾರೆ ಎಂದರು.

ಕಾಲೇಜಿನ ದೈಹಿಕ ನಿರ್ದೇಶಕ ಎಸ್ ಬಿ ಗೌಡರ ಮಾಹಿತಿ ನೀಡಿ, ಗದಗ, ಹಾವೇರಿ, ಕಾರವಾರ ಮತ್ತು ಧಾರವಾಡ ಜಿಲ್ಲೆಗಳ ಅಂದಾಜು 15 ತಂಡಗಳು ಈ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿವೆ. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ ವಹಿಸಿಕೊಳ್ಳಲಿದ್ದು, ಮುಖ್ಯ ಅತಿಥಿಗಳಾಗಿ ಕಾಲೇಜು ಆಡಳಿತ ಮಂಡಳಿ ಚೇರಮನ್ ಬಸವರಾಜ ವೀರಾಪೂರ, ಸಂಸ್ಥೆಯ ಆಡಳಿತಾಧಿಕಾರಿ ಎನ್ ಆರ್ ಗೌಡರ, ಸದಸ್ಯರಾದ ಸೋಮಣ್ಣ ಹರ್ಲಾಪೂರ, ನಿವೃತ್ತ ಪ್ರಾಚಾರ್ಯ ಬಿ ಎಫ್ ಚೇಗರೆಡ್ಡಿ, ಪ್ರಾಚಾರ್ಯ ಎಸ್ ಜಿ ಕೇಶಣ್ಣವರ, ಜಿಮಖಾನ ಚೇರಮನ್ ಡಾ. ಡಿ ಎಲ್ ಪಾಟೀಲ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

# ಸರ್ಕಾರಿ ಹಿರಿಯ ಕನ್ನಡ ಪ್ರೌಢಶಾಲೆಯಲ್ಲಿ ನೋಟ್‌ಬುಕ್ ವಿತರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಎಸ್ ಎಂ ಕೃಷ್ಣ ನಗರದ ಸರ್ಕಾರಿ ಹಿರಿಯ ಕನ್ನಡ ಪ್ರೌಢಶಾಲೆಯಲ್ಲಿ ಎಂ ಜಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನೋಟ್‌ಬುಕ್ ವಿತರಿಸಲಾಯಿತು. ಈ ಸಂದರ್ಭದಲ್ಲಿ ಟ್ರಸ್ಟ್‌ನ ಅಧ್ಯಕ್ಷ ಮಕ್ತುಮಸಾಬ ನಾಯಕ ಮಾತನಾಡಿ, ಮನುಷ್ಯನು ಮಾನವೀಯತೆಗಾಗಿ ದುಡಿಯಬೇಕೇ ಹೊರತು, ಸ್ವಾರ್ಥಕ್ಕಾಗಿ ಅಲ್ಲ. ನಮ್ಮ ಟ್ರಸ್ಟ್ ಮಾನವೀಯತೆಯ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿದೆ. ಎಲ್ಲರೂ ಒಳ್ಳೆಯ ಶಿಕ್ಷಣ ಪಡೆದು, ಸಮಾಜದ ಅತ್ಯುನ್ನತ ಸ್ಥಾನ ಅಲಂಕರಿಸಿ ಮಾನವೀಯತೆಯ ಕೆಲಸ ಮಾಡಲು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಟ್ರಸ್ಟ್‌ನ ಕಾರ್ಯದರ್ಶಿ ಮೌಲಾನಾ ಅಬ್ದುಲ್ ಗಫೂರ ಪಲ್ಲೇದ, ಹಿರಿಯರಾದ ಹಾಜಿ ಅಬ್ದುಲ್ ರಜಾಕ್ ಜಕಾತಿ ಅಬೂಹುರೆರಾ ಮಸ್ಜಿದ್ ಗಂಗಿಮಡಿಯ ಕಾರ್ಯದರ್ಶಿ ಮಹಮ್ಮದ್‌ಸಾಬ್ ಬೊದ್ಲೆಖಾನ್, ಚಾಂದಸಾಬ ಅಬ್ಬಿಗೇರಿ, ದಾವೂದ್‌ಕುರಹಟ್ಟಿ, ಹಾಫಿಜ್ ಅಬ್ದುಲ್ಲಾಹ, ಮೋಹಿದ್ದಿನ್, ಶಾಲೆಯ ಮುಖ್ಯೋಪಾದ್ಯಾಯರು, ಶಿಕ್ಷಕರು, ಸಿಬ್ಬಂದಿ ವರ್ಗ, ಎಸ್‌ಡಿಎಂಸಿ ಅಧ್ಯಕ್ಷರು ಹಾಜರಿದ್ದರು.

# ವಕೀಲರ ರಕ್ಷಣೆಗಾಗಿ ವಿಶೇಷ ಕಾನೂನು ಜಾರಿಗೊಳಿಸಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಇತ್ತೀಚಿನ ದಿನಗಳಲ್ಲಿ ರಾಜ್ಯಾದ್ಯಂತ ವಕೀಲರ ಮೇಲೆ ಹಲ್ಲೆಗಳು ನಡೆಯುತ್ತಿದ್ದು, ವಕೀಲರ ರಕ್ಷಣೆಗೆ ಸರ್ಕಾರ ವಿಶೇಷ ಕಾನೂನು ಜಾರಿಗೊಳಿಬೇಕೆಂದು ಲಕ್ಷ್ಮೇಶ್ವರ ವಕೀಲರ ಸಂಘದ ಅಧ್ಯಕ್ಷ ಬಿ ಎಸ್ ಬಾಳೇಶ್ವರಮಠ ಹೇಳಿದರು.

ಈ ಕುರಿತು ಸೋಮವಾರ ತಹಸೀಲ್ದಾರ ಕೆ ಆನಂದಶೀಲ ಅವರಿಗೆ ವಕೀಲರ ಸಂಘದಿಂದ ಮನವಿ ಸಲ್ಲಿಸಿ ಮಾತನಾಡಿ, ಹಳಿಯಾಳದ ವಕೀಲರ ಸಂಘದ ಅಧ್ಯಕ್ಷ ಎಮ್ ವಿ ಆಷ್ಟೇಕರ, ಮುಂಡರಗಿಯ ಹಿರಿಯ ವಕೀಲ ಬಿ ಎಚ್ ರಾಟಿ ಅವರ ಮೇಲೆ ಹಲ್ಲೆ ಮಾಡಿದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ರಾಜ್ಯದಲ್ಲಿ ವಕೀಲರ ರಕ್ಷಣಾ ಕಾನೂನು ಜಾರಿಗೆ ತರಬೇಕು. ರಾಜ್ಯಾದ್ಯಂತ ವಕೀಲರ ಸಂಘಗಳು ಸಂಘಟನೆಗಳು ಕರೆ ನೀಡಿದ ಹಿನ್ನೆಲೆಯಲ್ಲಿ ಹೋರಾಟ ನಡೆಸಲಾಗುತ್ತಿದೆ. ರಾಜ್ಯದ ಹಲವಾರು ವಕೀಲರಿಗೆ ನಿತ್ಯ ಒಂದಿಲ್ಲೊಂದು ಕಿರುಕುಳ, ಹಲ್ಲೆ, ಜೀವ ಬೆದರಿಕೆಗಳು ನಡೆಯುತ್ತಲೇ ಇವೆ. ಸೂಕ್ತ ಭದ್ರತೆ ಒದಗಿಸದಿದ್ದಲ್ಲಿ ವಕೀಲರ ಸಂಘಗಳೇ ನ್ಯಾಯಕ್ಕಾಗಿ ಹೋರಾಟಕ್ಕಿಳಿಯುವ ಅನಿವಾರ್ಯತೆ ತಲೆದೋರುತ್ತದೆ ಎಂದರು. ಹಿರಿಯ ವಕೀಲ ವಿ ಎಲ್ ಪೂಜಾರ, ಎಸ್ ಪಿ ಬಳಿಗಾರ, ವಿ ಬಿ ಪಾಟೀಲ ಮುಂತಾದವರು ಮಾತನಾಡಿ, ವಕೀಲರ ಮೇಲೆ ನಡೆಯುತ್ತಿರುವ ಹಲ್ಲೆ, ದೌರ್ಜನ್ಯ, ಕೊಲೆ ಬೆದರಿಕೆಗಳನ್ನು ಖಂಡಿಸಿದರು. ಬಿ ಎಸ್ ಘೋಂಗಡಿ, ಎಸ್ ಆರ್ ಅತ್ತಿಗೇರಿ, ಪ್ರಕಾಶ ವಾಲಿ, ಜೆ ಡಿ ದೊಡ್ಡಮನಿ, ಸುರೇಶ ನಾವಿ, ಎನ್ ಐ ಬೆಲ್ಲದ, ವಿಠ್ಠಲ ನಾಯಕ, ಉಮಾ ಬಳ್ಳಾರಿ, ಎನ್ ಸಿ ಅಮಾಸಿ, ಎಂ ಎನ್ ರಿತ್ತಿಮಠ, ಸುಧಾ ಮಾಗಡಿ ಮುಂತಾದವರಿದ್ದರು.

ತಾಲೂಕಿನಾದ್ಯಂತ ಗೋವಿನಜೋಳಕ್ಕೆ ಲದ್ದಿ ಹುಳು ಕಾಟ: ತಪ್ಪದ ಸಂಕಷ್ಟ

# ನೆಚ್ಚಿದ ಬೆಳೆಗೆ ರೋಗ ಬಾಧೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮುಂಗಾರು ಮಳೆ ಕೊರತೆಯ ನಡುವೆಯೂ ಖರ್ಚು-ವೆಚ್ಚದ ಲೆಕ್ಕಾಚಾರ ಹಾಕಿದ ಬಹುತೇಕ ರೈತ ಸಮುದಾಯ ಗೋವಿನಜೋಳ ಬಿತ್ತನೆ ಮಾಡಿದ್ದಾರೆ. ಆದರೆ, ಗೋವಿನ ಜೋಳ ಬೆಳೆಗೆ ಮೆಲೇಳುವ ಮೊದಲೇ ಲದ್ದಿಹುಳು ಬಾಧೆ ಆವರಿಸುತ್ತಿದ್ದು ರೈತರಿಗೆ ಸಂಕಷ್ಟ ತಪ್ಪದಂತಾಗಿದೆ.

ಆಳಿನ ಸಮಸ್ಯೆಗಳ ನಡುವೆ ಕಡಿಮೆ ಖರ್ಚು, ನಿರ್ವಹಣೆ ಸುಲಭ ಎಂಬಿತ್ಯಾದಿ ಕಾರಣದಿಂದ ತಾಲೂಕಿನ ಬಹುತೇಕ ರೈತರು ಗೋವಿನಜೋಳ ಬೆಳೆಗೆ ಮಾರು ಹೋಗಿದ್ದಾರೆ. ಪರಿಣಾಮ, ತಾಲೂಕಿನ ಲಕ್ಷ್ಮೇಶ್ವರ, ದೊಡ್ಡೂರ, ಶಿಗ್ಲಿ, ಸೂರಣಗಿ, ಬಡ್ನಿ, ಅಡರಕಟ್ಟಿ, ಬಾಲೆಹೊಸೂರ, ಉಂಡೇನಹಳ್ಳಿ, ಯಲ್ಲಾಪುರ ಸೇರಿ ಒಟ್ಟು 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಗೋವಿನಜೋಳ ಬಿತ್ತನೆಯಾಗಿದೆ. ಒಟ್ಟು 30 ಸಾವಿರ ಹೆಕ್ಟೇರ್ ಪ್ರದೇಶದ ಬಿತ್ತನೆ ಕ್ಷೇತ್ರದಲ್ಲಿ ಗೋವಿನ ಜೋಳದ್ದೇ ಸಿಂಹಪಾಲು. ಜೂನ್ ಕೊನೆ ಮತ್ತು ಜುಲೈ ಮೊದಲ ವಾರದಲ್ಲಿ ಬಿತ್ತನೆಯಾಗಿರುವ ಬೆಳೆ ಈಗ 15-20 ದಿನಗಳ ಬೆಳವಣಿಗೆಯಲ್ಲಿದೆ.

> ಭೂಮಿಯಲ್ಲಿ ಹಸಿರು ಹೆಚ್ಚಿದಂತೆ ಈ ರೀತಿಯ ಕೀಟಗಳ ಸಂತಾನೋತ್ಪತ್ತಿಗೆ ಪೂರಕ ವಾತಾವರಣ ಕಲ್ಪಿಸಿದಂತಾಗಿ ಅವುಗಳ ಪ್ರಮಾಣ, ಪ್ರಭಾವ ಹೆಚ್ಚುತ್ತದೆ. 10-15 ದಿನಗಳ ಅವಧಿಯಿಂದ ಒಂದು ತಿಂಗಳ ಅವಧಿಯ ಬೆಳೆಗಳಿಗೆ ನಷ್ಟ ಮಾಡುತ್ತದೆ. ರೈತರು ಪ್ರಾರಂಭಿಕ ಹಂತದಲ್ಲಿಯೇ ಇದನ್ನು ಗಮನಿಸಿ 1 ಟ್ಯಾಂಕ್(15 ಲೀಟರ್) ನೀರಿಗೆ 8-10 ಗ್ರಾಂ ಎಮಾಮೆಕ್ಟ್ಯಾವ್ ಬೆಂಜ್ಯಾಯೇಟ್ ಬೆರೆಸಿ ಸಿಂಪಡಣೆ ಮಾಡಬೇಕು. ಲಕ್ಷ್ಮೇಶ್ವರದ ರೈತ ಸಂಪರ್ಕ ಕೇಂದ್ರದಲ್ಲಿ ಕ್ರಿಮಿನಾಶಕ ಲಭ್ಯವಿದೆ. ರೈತರು ಕೃಷಿ ಸಹಾಯಕ ಅಧಿಕಾರಿಗಳನ್ನು ಸಂಪರ್ಕಿಸಿ ಸೂಕ್ತ ಮಾಹಿತಿ ಪಡೆದುಕೊಳ್ಳಬೇಕು.
> **- ಚಂದ್ರಶೇಖರ ನರಸಮ್ಮನವರ.**
> ಕೃಷಿ ಅಧಿಕಾರಿ, ಲಕ್ಷ್ಮೇಶ್ವರ.

> ಪ್ರತಿ ವರ್ಷ ಗೋವಿನಜೋಳ, ಹೆಸರು, ಶೇಂಗಾ ಸೇರಿ ಮುಂಗಾರಿನ ಪ್ರಮುಖ ವಾಣಿಜ್ಯ ಬೆಳೆಗಳಿಗೆ ಕೀಟಬಾಧೆ, ರೋಗಬಾಧೆ ತಗುಲಿ ಬೆಳೆಹಾನಿ ಅನುಭವಿಸುತ್ತಿದ್ದಾರೆ. ಇದಕ್ಕೆ ರೈತರಿಗೆ ಸೂಕ್ತ ತಿಳುವಳಿಕೆ, ಯಾವುದೇ ಪರಿಹಾರ ಸಿಗುತ್ತಿಲ್ಲ. ಮುಂಗಾರು ಕೃಷಿಗೆ ಸಾಲ-ಸೋಲ ಮಾಡಿ ಕೈಯಲ್ಲಿ ಬಿಡಿಗಾಸೂ ಇಲ್ಲದೇ ಜೀವನ ನಿರ್ವಹಣೆಗೆ ಕಷ್ಟ ಪಡುತ್ತಿದ್ದಾರೆ. ರೈತರ ಬಗ್ಗೆ ಸರ್ಕಾರಕ್ಕೆ ಕಾಳಜಿಯಿದ್ದರೆ ರೈತರಿಗೆ ಉಚಿತವಾಗಿ ಕ್ರಿಮಿನಾಶಕ ಒದಗಿಸಬೇಕು. ಯಂತ್ರೋಪಕರಣ, ಪರಿಹಾರ ಧನ ಕಲ್ಪಿಸಬೇಕು ಎಂಬುದು ರೈತರ ಬೇಡಿಕೆಯಾಗಿದೆ.

ಈಗಲೇ ಲದ್ದಿ ಹುಳು ಬಾಧೆ ಆವರಿಸಿರುವುದು ರೈತರ ಜಂಘಾಬಲವೇ ಉಡುಗಿದೆ.

ಕಳೆದ ವರ್ಷದ ಅತಿವೃಷ್ಟಿ-ಅನಾವೃಷ್ಟಿಯಿಂದ ಕೃಷಿಯಲ್ಲಿ ನಷ್ಟ ಅನುಭವಿಸಿದ್ದರೂ ಹೊಸ ಭರಸವೆಯೊಂದಿಗೆ ಮತ್ತೆ ಭೂಮಿತಾಯಿಗೆ ಉಡಿ ತುಂಬಿರುವ ರೈತರು ಚಿಂತೆಗೀಡಾಗಿದ್ದಾರೆ. ಬೆಳೆಗೆ ತಗುಲಿರುವ ರೋಗಬಾಧೆ ತಡೆಯಲು ಸಾವಿರಾರು ರೂ ಖರ್ಚು ಮಾಡಿ ಕ್ರಿಮಿನಾಕಶಕ ಸಿಂಪಡಣೆಗೆ ಮೊರೆ ಹೋಗಿದ್ದಾರೆ. ಈಗಾಗಲೇ ಪ್ರತಿ ಎಕರೆಗೆ ಉಳುಮೆ, ಬೀಜ, ಗೊಬ್ಬರ, ಬಿತ್ತನೆ ವೆಚ್ಚ ಸೇರಿ ಸಾವಿರಾರು ರೂ ಖರ್ಚು ಮಾಡಿದ್ದಾರೆ. ಮಳೆ ಕೊರತೆ, ರೋಗಬಾಧೆ, ಬೆಳೆಹಾನಿ, ಬೆಲೆ ಕುಸಿತ ಹೀಗೆ ಹತ್ತಾರು ಸಮಸ್ಯೆಗಳು ರೈತರ ಪಾಲಿಗೆ ತಪ್ಪದ ಗೋಳಾಗಿದೆ. ಹೀಗಾದರೆ ರೈತ ಬದುಕುವುದಾದರೂ ಹೇಗೆ ಎಂಬುದು ರೈತರಾದ ವಿರುಪಾಕ್ಷಪ್ಪ ಗುಡ್ಡಣ್ಣವರ, ಚನ್ನಪ್ಪ ಷಣ್ಮುಕಿ, ಶಂಭು ಭಂಡಿವಾಡ ಸೇರಿ ಗೋವಿನಜೋಳ ಬೆಳೆದ ಬಹುತೇಕ ರೈತರ ಅಳಲಾಗಿದೆ.

ಬಜಾಜ್ ಅಲಾಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿಯಿಂದ ರೈತರಿಗೆ ಪರಿಹಾರ ನೀಡುವಲ್ಲಿ ಮೋಸ

# ಅಧಿಕಾರಿಗಳ ನಕಲಿ ಸಹಿ ಮಾಡಿ ವಂಚಿಸಿದ ಇನ್ಸೂರೆನ್ಸ್ ಕಂಪನಿ



■ ವಿಜಯಸಾಕ್ಷಿ ಸುದ್ದಿ, ರೋಣ

ಬೆಳೆ ವಿಮೆ ಪರಿಹಾರ ನೀಡುವಲ್ಲಿ ರೈತರಿಗೆ ಬಜಾಜ್ ಅಲಾಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ ಮೋಸವೆಸಗಿದ ಕುರಿತು ರೋಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಜಾಜ್ ಅಲಾಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿಯ ಮ್ಯಾನೇಜರ್ ಸಂದೇಶ ವೈ, ಬ್ಯುಸಿನೆಸ್ ಸೊಲ್ಯುಷನ್ಸ್ ಜಿಲ್ಲಾ ಕೋ-ಆರ್ಡಿನೇಟರ್ ಶ್ರೀಕಾಂತ್ ನಾಡಿಗರ್, ಬೆಂಗಳೂರಿನ ಸ್ಟೇಟ್ ಮ್ಯಾನೇಜರ್ ವಿನಯ, ಶಾಂತಿಭೂಷಣ, ಹುಬ್ಬಳ್ಳಿಯ ವಿನಯ, ಸಲೀಂ, ಬಜಾಜ್ ಅಲಾಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿಯ ಪುಣೆಯಲ್ಲಿರುವ ಮ್ಯಾನೇಜಿಂಗ್ ಡೈರೆಕ್ಟರ್ ಹಾಗೂ ಕಂಪನಿಯ ವಿರುದ್ಧ ಪ್ರಕರಣ ದಾಖಲಾಗಿದೆ.

2022ರ ಮುಂಗಾರು ಹಂಗಾಮಿನಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಬಜಾಜ್ ಅಲಾಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿಯವರು ತಮ್ಮ ಪ್ರಕಟಣೆಯಲ್ಲಿ, ರೈತರು ಈರುಳ್ಳಿ, ಮೆಣಸಿನಕಾಯಿ ಹಾಗೂ ಇತರೆ ಬೆಳೆಗಳಿಗೆ ವಿಮೆ ನೋಂದಣಿ ಮಾಡುವಂತೆ ಪ್ರಕಟಣೆ ನೀಡಿದ್ದರು. ಅದರಂತೆ, ರೈತರು ಬಜಾಜ್ ಅಲಾಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿಯವರಿಗೆ ವಿಮೆಯ ಪ್ರೀಮಿಯಂ ಹಣವನ್ನು ಬ್ಯಾಂಕ್ ಮೂಲಕ ಜಮಾ ಮಾಡಿದ್ದರು.

2022ರ ಸಾಲಿನ ಮುಂಗಾರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿ ಈರುಳ್ಳಿ ಹಾಗೂ ಮೆಣಸಿನಕಾಯಿ ಸೇರಿದಂತೆ ಇತರ ಬೆಳೆಗಳೂ ಹಾನಿನೊಳಗಾಗಿದ್ದವು. ಈ ಹಿನ್ನೆಲೆಯಲ್ಲಿ ಬೆಳೆ ವಿಮೆ ತುಂಬಿದ ರೈತರು ಬಜಾಜ್ ಅಲಾಯನ್ಸ್ ಕಂಪನಿಗೆ ಸ್ಥಳೀಯ ಗಂಡಾಂತರ ಪರಿಹಾರ ನೀಡಲು ಅರ್ಜಿ ಸಲ್ಲಿಸಿದ್ದರು.

ನಂತರ ಕಂಪನಿಯವರು ಹೋಬಳಿ ಮಟ್ಟದ ಅಧಿಕಾರಿಗಳಾದ ಗ್ರಾಮ ಲೆಕ್ಕಾಧಿಕಾರಿಗಳು, ಸಹಾಯಕ ತೋಟಗಾರಿಕಾ ಅಧಿಕಾರಿಗಳು, ಕೃಷಿ ಅಧಿಕಾರಿಗಳು ಹಾಗೂ ವಿಮೆ ಹಣ ತುಂಬಿದ ರೈತರೊಂದಿಗೆ ಹಾನಿಯಾದ ಬೆಳೆ, ಕ್ಷೇತ್ರದ ಜಂಟಿ ಸಮೀಕ್ಷೆ ಮಾಡಬೇಕಾಗಿತ್ತು. 27-08-2022ರ ನಂತರ ಬಜಾಜ್ ಅಲಾಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿಯವರು ಬೆಳೆ ವಿಮೆ ಸಮೀಕ್ಷೆ ಬಗ್ಗೆ ಯಾವುದೇ ಇಲಾಖೆಗೆ ಮಾಹಿತಿ ತಿಳಸದೇ, ಜಿಪಿಎಸ್ ಮಾಡದೇ ಏಕಪಕ್ಷೀಯವಾಗಿ ಸಮೀಕ್ಷೆ ಕೈಗೊಂಡು, ಸಹಾಯಕ ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ಸಹಿ ಪಡೆಯದೇ ದಾಖಲಾತಿ ಸೃಷ್ಟಿಸಿ, ಅಧಿಕಾರಿಗಳ ಸಹಿಯನ್ನು ತಾವೇ ಫೋರ್ಜರಿ ಮಾಡಿ ಗದುಗಿನ ತೋಟಗಾರಿಕಾ ಉಪನಿರ್ದೇಶಕರ ಕಚೇರಿಗೆ ಇ-ಮೇಲ್ ಮಾಡಿದ್ದಾರೆ.

ತಾಲೂಕಿನ ಸವಡಿ ಗ್ರಾಮದ ರೈತರು 1,06,639 ರೂ.ಗಳ ಪ್ರೀಮಿಯಂ ಹಣ ತುಂಬಿದ್ದರು. ಅತಿವೃಷ್ಟಿಯಿಂದ ಮಧ್ಯಂತರ ಪರಿಹಾರವಾಗಿ 1,15,417 ರೂಪಾಯಿಗಳು ರೈತರ ಖಾತೆಗಳಿಗೆ ಜಮಾ ಆಗಿದೆ ಎಂದು ತೋಟಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ವರದಿ ನೀಡಿದ್ದಾರೆ.

ಮಾರ್ಗಸೂಚಿಗಳ ಪ್ರಕಾರ, ಬೆಳೆಯ ಮಾಗುವಿಕೆ ಮತ್ತು ಕೊಯ್ಲಿನ ನಂತರ ಶೇಕಡಾವಾರು ಪರಿಹಾರ ಮೊತ್ತವನ್ನು ತೋಟಗಾರಿಕಾ ಅಧಿಕಾರಿಗಳು ಲೆಕ್ಕಾಚಾರ ಮಾಡಿದ ಪ್ರಕಾರ 5,58,502 ರೂ. ಹಣ ರೈತರಿಗೆ ಬರಬೇಕಾಗಿತ್ತು. ಆದರೆ ಹಣ ಸಂದಾಯ ಮಾಡದೇ ಬಜಾಜ್ ಅಲಾಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿಯು ದುರ್ಬಳಕೆ ಮಾಡಿಕೊಂಡು ರೈತರಿಗೆ ಮೋಸ ಮಾಡುವ ಉದ್ದೇಶಕ್ಕಾಗಿ ಸುಳ್ಳು, ಸ್ಪಷ್ಟನೆ ಮಾಡಿ ಸರಿಯಾದ ಸಮೀಕ್ಷೆ ಮಾಡದೇ ಅಧಿಕಾರಿಗಳ ನಕಲಿ ಸಹಿ ಮಾಡಿ, ಅವುಗಳ ನೈಜ ದಾಖಲಾತಿಗಳು ಇವೆ ಎಂದು ಮೋಸ ಮಾಡಿದ್ದಾರೆ ಎಂದು ರೋಣ ಕೃಷಿ ಇಲಾಖೆಯ ಉಪನಿರ್ದೇಶಕರಾದ ಡಾ. ನಾಗನಗೌಡ ರೆಡ್ಡಿ ರೋಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಈ ಕುರಿತು ರೋಣ ಪೊಲೀಸ್ ಠಾಣೆಯಲ್ಲಿ 0108/2023 IPC 1860, ಕಲಂ 406, 420, 464, 468, 471 ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

# ಕಲಿಕಾಮಟ್ಟ ಹೆಚ್ಚಿಸಲು ಪಠ್ಯೇತರ ಚಟುವಟಿಕೆಗಳು ಅಗತ್ಯ



■ ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳಲ್ಲಿರುವ ಸೂಕ್ತ ಪ್ರತಿಭೆಗಳನ್ನು ಗುರುತಿಸಿ, ಅವರಲ್ಲಿರುವ ಸೃಜನಶೀಲತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜಾರಿಗೊಳಿಸಿರುವ 'ಶನಿವಾರ ಸಂಭ್ರಮ-ಬ್ಯಾಗ್‌ಲೆಸ್ ಡೇ' ಅನ್ನು ಗಂಗಾಪುರ ಪೇಟೆಯಲ್ಲಿರುವ ಶ್ರೀ ದುರ್ಗಾದೇವಿ ಶಿಕ್ಷಣ ಸಮಿತಿಯ ವಿದ್ಯಾರ್ಥಿಗಳು ಸಂಭ್ರಮದಿಂದ ಆಚರಿಸಿದರು. ವಿದ್ಯಾರ್ಥಿಗಳು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಬುಡಕಟ್ಟು ಜನಾಂಗ, ಗ್ರಾಮೀಣ ಜನರ ಬದುಕು ಹಾಗೂ ನಗರದ ಜನರ ವೇಷಭೂಷಣಗಳೊಂದಿಗೆ ಅವರ ಸಂಪ್ರದಾಯ, ಜೀವನ ಶೈಲಿಯನ್ನು ಮನಮುಟ್ಟುವ ರೀತಿಯಲ್ಲಿ ಪ್ರದರ್ಶಿಸಿದರು. ಇನ್ನೂ ಕೆಲವು ಮಕ್ಕಳು ತಮಗಿಷ್ಟವಾದ ಜಲಚರ, ಕಾಡು ಮತ್ತು ನಾಡಿನಲ್ಲಿ ವಾಸಿಸುವ ಪ್ರಾಣಿಗಳ ಚಿತ್ರವನ್ನು ತೆಗೆದು ಅವುಗಳ ಬಗ್ಗೆ ವಿಶ್ಲೇಷಿಸಿದರು. ತರಕಾರಿಗಳು ಆರೋಗ್ಯಕ್ಕೆ ಹೇಗೆ ಸಹಕಾರಿಯಾಗಿದೆ ಎಂದು ಶಾಲಾ ಆವರಣದಲ್ಲಿ ತರಕಾರಿ ಮಾರುಕಟ್ಟೆಯ ವಾತಾವರಣ ನಿರ್ಮಿಸಿ, ವ್ಯಾಪಾರ ಮಾಡಿದರು. ಇನ್ನು ಕೆಲವು ವಿದ್ಯಾರ್ಥಿಗಳು ತಮ್ಮಲ್ಲಿ ಅಡಗಿರುವ ಪ್ರತಿಭೆಗಳನ್ನು ನಾಟಕ ಮತ್ತು ಹಾಡುಗಳ ಮೂಲಕ ಪ್ರದರ್ಶಿಸಿದರು.

ಶಾಲೆಯ ಮುಖ್ಯೋ ಪಾಧ್ಯಾಯರಾದ ಎಚ್ ಎಂ ನದಾಫ್ ಮಾತನಾಡಿ, ಮಕ್ಕಳಿಗೆ ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳೂ ಮುಖ್ಯವಾಗಿದ್ದು, ಇದರಿಂದ ಮಕ್ಕಳಲ್ಲಿರುವ ವಿವಿಧ ಪ್ರತಿಭೆಗಳನ್ನು ಗುರುತಿಸಲು ಮತ್ತು ಅವರಲ್ಲಿರುವ ಕಲಿಕಾ ಮಟ್ಟವನ್ನು ಹೆಚ್ಚಿಸಲು ಸಹಾಯವಾಗುತ್ತದೆ. ಪ್ರತಿ ತಿಂಗಳು ಮೂರನೇ ಶನಿವಾರದಂದು 'ಬ್ಯಾಗ್‌ಲೆಸ್ ಡೇ' ಹಮ್ಮಿಕೊಳ್ಳಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಸಹ ಶಿಕ್ಷಕಿಯರಾದ ಮಂಜುಳಾ ಹಿಡ್ಕಿಮಠ, ರೇಖಾ ಅಂಗಡಿ, ಸುಧಾ ತಿರಕನಗೌಡ್ರ, ವಂದನಾ ಕಲ್ಮನಿ, ಜ್ಯೋತಿ ಅರಸಿದ್ದಿ, ಸಿಬ್ಬಂದಿಗಳಾದ ಲಕ್ಷ್ಮಿ ಕಮಡೊಳ್ಳಿ, ಸೈನಾಜ್‌ಬಾನು ರೋಣ ಮುಂತಾದವರು ಉಪಸ್ಥಿತರಿದ್ದರು.

ವಕೀಲರ ಮೇಲಿನ ಹಲ್ಲೆ ಖಂಡಿಸಿ ಜಿಲ್ಲಾ ವಕೀಲರ ಸಂಘದಿಂದ ಸರ್ಕಾರಕ್ಕೆ ಮನವಿ

# ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ತನ್ನಿ



■ ವಿಜಯಸಾಕ್ಷಿ ಸುದ್ದಿ, ಗದಗ

ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಕೊಡಿಸುವ ವಕೀಲರ ಮೇಲೆ ರಾಜ್ಯಾದ್ಯಂತ ಹಲ್ಲೆಗಳು ನಡೆಯುತ್ತಿದ್ದು, ಶೀಘ್ರವೇ ವಕೀಲರ ರಕ್ಷಣಾ ಕಾಯ್ದೆಯನ್ನು ಜಾರಿಗೆ ತರಬೇಕು, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಗದಗ ಜಿಲ್ಲಾ ವಕೀಲರ ಸಂಘದಿಂದ ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು.

ರಾಜ್ಯಾದ್ಯಂತ ವಕೀಲರ ಮೇಲೆ ಪದೇಪದೇ ಹಲ್ಲೆ, ಜೀವ ಬೆದರಿಕೆಯಂತಹ ಪ್ರಕರಣಗಳು ಹೆಚ್ಚುತ್ತಿದ್ದು, ವಕೀಲರು ಭಯದಲ್ಲಿಯೇ ಕೆಲಸ ನಿರ್ವಹಿಸುವ ವಾತಾವರಣ ಸೃಷ್ಟಿಯಾಗುತ್ತಿದೆ. ಸರಕಾರ ಕೂಡಲೇ ವಕೀಲರ ರಕ್ಷಣಾ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ವಕೀಲರ ರಕ್ಷಣೆಗೆ ಮುಂದಾಗಬೇಕು ಎಂದು ಗದಗ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಮ್ ಐ ಹಿರೇಮನಿಪಾಟೀಲ ಅವರು ಸರಕಾರಕ್ಕೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಅಶೋಕ ಹದ್ಲಿ, ಕಾರ್ಯದರ್ಶಿ ಬಿ ಎಚ್ ಮಾಡಲಗೇರಿ, ಸಹ ಕಾರ್ಯದರ್ಶಿ ಪ್ರಕಾಶ ಕಣಗಿನಹಾಳ, ಖಜಾಂಚಿ ವಿಜಯ ಮೇರವಾಡೆ, ನ್ಯಾಯವಾದಿಗಳಾದ ಜಿ ಬಿ ನೀಲರಡ್ಡಿ, ಬಿ ಎಮ್ ಶಿಳ್ಳಿನ, ಎಸ್ ಕೆ ನದಾಫ, ಮುತ್ತು ನಾಯ್ಕರ, ಎ ಡಿ ಬಡಿಗೇರ, ಬಿ ಎಸ್ ಕಿರಿಟಗೇರಿ, ಮೌನೇಶ ಪತ್ತಾರ, ಆರ್ ವಿ ಕುಮಾರ, ಎಮ್ ಎ ಮೌಲ್ವಿ, ಎಸ್ ವೈ ಕಲ್ಲಾಪೂರ, ಆರ್ ಎಸ್ ಹತ್ತಿಕಾಳ, ವಾಯ್ ಡಿ ತಳವಾರ, ಎಮ್ ಬಿ ಮತ್ತೂರ, ಎಸ್ ಎಸ್ ಕೋರಿ, ಎಮ್ ಎ ಸಂಗನಾಳ, ಎಮ್ ಎಸ್ ಅರವಟಗಿ, ಆನಂದ ಬಣ್ಣದಬಾವಿ, ಎಮ್ ಎಸ್ ಕಾರಡಗಿ, ಗಿರೀಶ ಸಂಶಿ, ಚಿನ್ನಾರಡ್ಡಿ ಗೂಳರಡ್ಡಿ, ಆನಂದ ಹಟ್ಟಿ, ಸಂದೀಪ ಮಾನ್ವಿ, ಝಡ್ ಎ ನಮಾಜಿ, ಹರೀಶ ರಾಂಪೂರ, ಜೆ ಎ ಉದೋಜಿ, ವಿ ಡಿ ದೊಡ್ಡಮನಿ, ಆನಂದ ಸಿದ್ದನಗೌಡ್ರ, ಎಚ್ ವಿ ಗೊಜನೂರ, ಮುದ್ದನಗೌಡ್ರ, ಶ್ರೀಶೈಲ ಹೂಗಾರ, ವಾಯ್ ಎನ್ ಕುರಹಟ್ಟಿ, ಎನ್ ಬಿ ಚಿಂಚಲಿ, ಅಶೋಕ ಸತ್ಯಮ್ಮನವರ, ಬಸವರಾಜ ದಿವಟರ, ಕುಮಾರ ಜಿ ವಿ, ಸುರೇಶ ಹಂಚಿನಾಳ, ಮಹಿಳಾ ನ್ಯಾಯವಾದಿಗಳಾದ ಶಾರದಾ ಕವಲೂರ, ಎಸ್ ಆರ್ ಉಮಚಗಿ, ಅನಿತಾ ಮಲ್ಲಾಪೂರ, ಪ್ರಿಯಾಂಕಾ ಹುಬ್ಬಳ್ಳಿ, ಪಾರ್ವತಿ ಬಂಡಾ, ರೇಷ್ಮಾ ಲಕ್ಷ್ಮೇಶ್ವರ, ಶಶಿರೇಖಾ ಡಾವಣಗೇರಿ, ನಿಂಗಮ್ಮ ಚಿಂತಕಮಲದಿನ್ನಿ ಮುಂತಾದವರು ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka